ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''1993ರ ಹೈದರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀರಂಗದೇವರಾಯಲು(ಅಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ತಿದ್ದುಪಡಿ) ವಿಧೇಯಕ 1993.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೇ, ಇದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ - ಇದರಲ್ಲಿ ನಾಲ್ಕನೆಯ ಪ್ರಕರಣದ ತಿದ್ದುಪಡಿ ಇಲ್ಲಿ Constitution of the Board ಎಂದಿದೆ. ಅದರಲ್ಲಿ ಸೆಕ್ಷನ್ 1(ಸಿ)ನಲ್ಲಿ three Directors to represent respectively the Government Secretaries Department dealing in Finance ಒಂದು Health and Municipal Administration ಒಂದು Public works Department ಒಂದು ಎಂದಿದೆ. ಇದರಲ್ಲಿ ಮೂರು ಜನ ನಿರ್ದೇಶಕರು ಎಂಬುದಕ್ಕೆ ಬದಲಾಗಿ ನಾಲ್ಕು ಜನ ನಿರ್ದೇಶಕರು ಎಂದು ನಾವು ಕರೆಯಬೇಕಾಗುತ್ತದೆ. ಜೊತೆಗೆ ಪೌರಾಡಳಿತ ನಿರ್ದೇಶಕರಿಗೆ ಜಾಗ ಇರಲಿಲ್ಲ. ಏಕೆಂದರೆ ಇದು ವಾಟರ್ ಸಪ್ಲೈಗೆ ಸಂಬಂಧಪಟ್ಟಿದ್ದುದು. ಮುನಿಸಿಪಾಲಿಟಿಗಳಿಗೆ ನೀರು ಸರಬರಾಜು ಮಾಡಿ ಅವರಿಗೆ ಈ ಯೋಜನೆ ತಯಾರುಮಾಡಿ ಕಾರ್ಯಗತ ಮಾಡಿದ ಮೇಲೆ ಸರಿಯಾದ ರೀತಿಯಲ್ಲಿ ನೀರುಸರಬರಾಜು ಮಾಡಿದ್ದಾರೆಯೇ ಇಲ್ಲವೇ ಎಂದು ನೋಡಬೇಕು. ಹಿಂದೆ ಮುನಿಸಿಪಾಲಿಟಿಯವರು ಏನು ಲೋನ್ ತೆಗೆದುಕೊಂಡಿರುತ್ತಾರೋ ಅದನ್ನು ರೀಪೇಮೆಂಟ್ ಮಾಡುವುದಕ್ಕೆ , ಕೇಳುವುದಕ್ಕೆ ಕೂಡ ಅವಕಾಶ ಇರಲಿಲ್ಲ. ಜೊತೆಗೆ ಹಣದ ವಿಚಾರವನ್ನೂ ಮುನಿಸಿಪಾಲಿಟಿ ವಿಷಯವಾಗಿ ಕೇಳತಕ್ಕಂಥವರು ಯಾರೂ ಇರಲಿಲ್ಲ. ಅದಕ್ಕೋಸ್ಕರ ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಶನ್ ಅವರು ಈ ಬೋರ್ಡ್‌ನಲ್ಲಿ ಇರಬೇಕೆಂದು ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಇನ್ನೊಂದು ಇದರಲ್ಲಿ, ನಾಲ್ಕು ಜನ ನಿರ್ದೇಶಕರಲ್ಲಿ ಮುನಿಸಿಪಲ್ ಡೈರೆಕ್ಟೊರೇಟ್‌ನವರು ಒಬ್ಬರಾಗಿರುತ್ತಾರೆ. ಇತರೆ ಮೂರರಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಒಂದು. ಹಳೆಯದ್ದರಲ್ಲಿ ಹೆಲ್ತ್ ಅಂಡ್ ಮುನಿಸಿಪಲ್

ಅಡ್ಮಿನಿಸ್ಟ್ರೇಶನ್ ಎಂದು ಇದೆ. ಇದನ್ನು ತೆಗೆದುಬಿಟ್ಟು ವಸತಿ ಮತ್ತು ನಗರಾಭಿವೃದ್ಧಿ ಎಂದು ರೀಪ್ಲೇಸ್ ಮಾಡಬೇಕಾಗಿದೆ. ಪಬ್ಲಿಕ್ ವರ್ಕ್ಸ್ ಹಾಗೆಯೇ ಇದೆ. ಇದು ಸಾಮಾನ್ಯ ತಿದ್ದುಪಡಿ. ಇದನ್ನು ದಯವಿಟ್ಟು ಅಂಗೀಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಗರಾಭಿವೃದ್ಧಿ ಸಚಿವರು ಈ ಒಂದು ವಿಧೇಯಕಕ್ಕೆ ಏನು ತಿದ್ದುಪಡಿಯನ್ನು ಮಂಡನೆ ಮಾಡಿದ್ದಾರೆ, ಇದರ ಬಗ್ಗೆ ನಮಗಂತೂ ಸಮಾಧಾನ ಆಗಿಲ್ಲ. ಏಕೆಂದರೆ ಮಾನ್ಯ ಚೌಡರೆಡ್ಡಿಯವರ ಬಗ್ಗೆ ಟೀಕೆ ಮಾಡುವುದು ಕೂಡ ನಮಗೆ ಸ್ವಲ್ಪ ಇಕ್ಕಟ್ಟೇ. ಏಕೆಂದರೆ ಅವರು ಹೊಸದಾಗಿ ಇಲಾಖೆಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಬಹಳ ವರ್ಷಗಳ ನಂತರ ಅವರು ಮಂತ್ರಿಯಾಗಿದ್ದಾರೆ. ಆದ್ದರಿಂದ ಇದಕ್ಕೆ ನೀವು ಜವಾಬ್ದಾರರು ಎಂದು ಹೇಳುವುದಕ್ಕೂ ಕೂಡ ನಮಗೆ ಕಷ್ಟವಾಗುತ್ತದೆ. ಆದರೆ ಈ ಒಳಚರಂಡಿ ಮಂಡಳಿಯ ಕೆಲಸಕಾರ್ಯಗಳು ಏನಿವೆ, ಅದರ ಬಗ್ಗೆ ನಮಗೆ ತೀವ್ರ ಅಸಮಾಧಾನ ಇದೆ. ಎಷ್ಟು ಎಂದು ಹೇಳಿದರೆ ಹಿಮಾಲಯದಷ್ಟು ಅಸಮಾಧಾನ ಇದೆ. ಏಕೆಂದರೆ ಇವರು ಯಾವ ಯೋಜನೆಗಳಿಗೆ ಎಲ್.ಐ.ಸಿ.ಯಿಂದ ಕೇಂದ್ರಸರ್ಕಾರದಿಂದ ಮತ್ತು ಅನೇಕ ಸಂಘಸಂಸ್ಥೆಗಳಿಂದ ಸಾಲದ ರೂಪದಲ್ಲಿ ಹಣ ತೆಗೆದುಕೊಂಡು ಬಂದಿದ್ದಾರೆ ಮತ್ತು ಹುಡ್ಕೋ ಸಂಸ್ಥೆಯ ನೆರವನ್ನೂ ಸಹಿತ ಪಡೆದಿದ್ದಾರೆ. ಆದರೆ ಈ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ವರ್ಷಾನುಗಟ್ಟಲೆ ಸಮಯ ತೆಗೆದುಕೊಳ್ಳುತ್ತಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಹತ್ತರಿಂದ ಹದಿನೈದು, ಕೆಲವು ಜಿಲ್ಲೆಗಳಲ್ಲಿ ಇಪ್ಪತ್ತು ಪಟ್ಟಣಗಳಿವೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಬರತಕ್ಕಂಥ ಏನು ಪಟ್ಟಣಗಳಿವೆ, ಯಾವುದೇ ಒಂದು ಪಟ್ಟಣದಲ್ಲಿ ಸಹಿತ, ಯಾವ ಮಂಡಳಿಯಲ್ಲಿ ಕೂಡ ಒಂದು ಪ್ಲಾನ್ ಸಹಿತ ಇಲ್ಲ. ನಾನು ಬೇರೆ ಜಿಲ್ಲೆಗಳಿಗೆ ಹೋಗುವುದಿಲ್ಲ.

ವಿಶೇಷವಾಗಿ ಹೇಳಬೇಕೆಂದರೆ, ಬಿಜಾಪುರ ಜಿಲ್ಲೆ, ರಾಯಚೂರು ಜಿಲ್ಲೆ, ಗುಲ್ಬರ್ಗಾ ಜಿಲ್ಲೆ, ಬೀದರ್ ಜಿಲ್ಲೆ, ಈ 4-5 ಜಿಲ್ಲೆಗಳಲ್ಲಿ, ಅಲ್ಲಿರತಕ್ಕ ಒಳಚರಂಡಿ ಇಲಾಖೆ ಏನೂ ಕೆಲಸ ಮಾಡುತ್ತಾ ಇಲ್ಲ. ಎಲ್ಲೂ ಸಹಿತ ಕೆಲಸ ಮಾಡುತ್ತಾ ಇಲ್ಲವೆಂದು ಹೇಳಬೇಕಾಗುತ್ತದೆ. ಪಾಪ, ಹಂದಿಗಳು ಇರುವುದರಿಂದ, ಅಲ್ಲಿಯ ಜನ ಖಾಯಿಲೆಗಳಿಲ್ಲದೇ ಬದುಕಲು ಸ್ವಲ್ಪ ಅನುಕೂಲವಾಗಿದೆ. ಆ ಪಟ್ಟಣಗಳಿಂದ ಏನಾದರೂ ಹಂದಿಗಳನ್ನು ಓಡಿಸಿದರೆ, ಅಲ್ಲಿಯ ಜನಗಳಿಗೆ ಎಲ್ಲಾ ಖಾಯಿಲೆಗಳೂ ಸಹಿತ ಬರುತ್ತದೆ. ಹಂದಿ ಇದ್ದರೆ ಬರತಕ್ಕ ಖಾಯಿಲೆ ಬೇರೆ ಅದಕ್ಕಾಗಿ ಹಂದಿಗಳನ್ನು ಊರಾಚೆ ಕಳುಹಿಸುತ್ತಾರೆ. ಈ ಒಳಚರಂಡಿ ಮಂಡಳಿ ಮಾಡತಕ್ಕ ಕೆಲಸವನ್ನು ತಾತ್ಕಾಲಿಕವಾಗಿ ಈ ಹಂದಿಗಳು ಮಾಡುತ್ತಿವೆ, ಈ ಸ್ಥಿತಿ ಬಂದಿದೆ. ಈ ಕಚೇರಿಗೆ ಹೋಗಿ ಎಲ್ಲೆಲ್ಲಿ ಏನೇನು ಯೋಜನೆ ಇದೆ ಎಂದು ಕೇಳಿ. ನೀವು ಇದರ ಬಗ್ಗೆ ತಿದ್ದುಪಡಿ ತರುತ್ತಿದ್ದೀರಿ. ಇಲ್ಲಿ ಒಳಚರಂಡಿ ಮಂಡಳಿ ಅಧಿಕಾರಿಗಳು ಯಾರಾದರೂ ಬಂದ್ದಿದ್ದಾರೆಯೇ? ನೀವು ಬರೀ ಡೈರೆಕ್ಟರುಗಳು ಎಂದು ಹೇಳುತ್ತೀರಿ. ಈಗ ತಿದ್ದುಪಡಿ ಬಂದಿದೆ. ಈ ತಿದ್ದುಪಡಿ ಬಗ್ಗೆ ಚರ್ಚೆಯಾಗುತ್ತಿದೆ, ಶಾಸಕರು ಬರುತ್ತಾರೆ, ಮತನಾಡುತ್ತಾರೆ ಎಂಬ ನಿಮ್ಮ ಸೌಜನ್ಯಕ್ಕಾದರೂ ಬರುವುದು ಬೇಡವೇ, ನಮಗೆ ಬೇಡ. ನಾವು ಕೇಳತಕ್ಕ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುವುದಕ್ಕೆ ನಿಮ್ಮ ಅಧಿಕಾರಿಗಳು ಅಲ್ಲಿ ಕುಳಿತುಕೊಳ್ಳಬೇಡವೇ, ನಿಮ್ಮ ಬಗ್ಗೆ ಅವರು ಎಷ್ಟೊಂದು ಗೌರವ ಇಟ್ಟುಕೊಂಡಿದ್ದಾರೆ ಅಥವಾ ನೀವು ಅವರ ಮೇಲೆ ಎಷ್ಟೊಂದು ಹಿಡಿತ ಇಟ್ಟುಕೊಂದ್ದೀರಿ, ದಯವಿಟ್ಟು ನೀವೇ ಯೋಚನೆ ಮಾಡಿ. ನಾನು ಬಿ.ಡಬ್ಲ್ಯು.ಎಸ್.ಎಸ್.ಬಿ. ಬಗ್ಗೆ ಮಾತನಾಡಲಿಲ್ಲ. ಏಕೆಂದರೆ, ಅದು ಪ್ರತ್ಯೇಕವಾದ ಬೋರ್ಡ್ ಆಗುತ್ತದೆ, ಅದಕ್ಕೆ ಪ್ರತ್ಯೇಕವಾದ ದುಡ್ಡು ಬರುತ್ತದೆ ಎಂದು. ನಮ್ಮ ಬೈರೇಗೌಡರೂ ಕೂಡ ಅದರ ಅಧ್ಯಕ್ಷರಾಗಿ ಸ್ವಲ್ಪ ದಿನಗಳ ಕಾಲ ಕೆಲಸ ಮಾಡಿದ್ದಾರೆ. ನೀವು ತರತಕ್ಕಂಥ ಹಣ

ಯಾವುದಿದೆ, ಅದನ್ನು ಪುಕ್ಕಟೆಯಾಗಿ ಯಾರೂ ಕೊಡುತ್ತಾ ಇಲ್ಲ, ಬಡ್ಡಿ ಮೇಲೆ ಕೊಡುತ್ತಾ ಬಂದಿದ್ದಾರೆ. ಒಂದೊಂದು ಯೋಜನೆ ತಯಾರು ಮಾಡಿ ಕೆಲಸ ಪ್ರಾರಂಭ ಮಾಡಿ ಮುಗಿಸುವುದಕ್ಕೆ 15ರಿಂದ 20 ವರ್ಷ ತೆಗೆದುಕೊಳ್ಳುತ್ತಾರೆ. ಅಷ್ಟರೊಳಗೆ, ಆ ಪಟ್ಟಣ ಮೂರರಷ್ಟು, ನಾಲ್ಕರಷ್ಟು ಬೆಳೆದಿರತಕ್ಕಂಥ ಉದಾಹರಣೆಗಳು ಇವೆ. ಏನು ಮಾಡುವುದು, ಅವರಿಗೆ ಹೇಳುವವರು, ಕೇಳುವವರು ಯಾರು ಸಹಿತ ಇಲ್ಲ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಸ್ಪೆಷಲ್ ಕಾಂಪೊನೆಂಟ್ ಗ್ರಾಂಟ್ ಏನಿದೆ ಅದರಲ್ಲಿ, ಕೊನೆಯ ಪಕ್ಷ ಕೆಲವು ಹಳ್ಳಿಗಳಿಗೆ, ಕೆಲವು ಪಟ್ಟಣಗಳಿಗೆ ಬೋರ್‌ವೆಲ್ ಹಾಕುತ್ತಾರೆ. ಈ ಬೋರ್‌ವೆಲ್‌ಗಳನ್ನು ಎಲ್ಲಿ ಹಾಕಿದ್ದಾರೆಂದರೆ, ಪರಿಶಿಷ್ಟ ಜನಾಂಗದ ಕೇರಿಗಳಲ್ಲಿ ಹಾಕಬೇಕೆಂದು ಇದ್ದರೂ, ಅಲ್ಲಿ ಹಾಕಿಲ್ಲ. ಇಂತಹ ಒಂದೆರಡು ನಿದರ್ಶನಗಳು ಅಲ್ಲ, ಅನೇಕ ನಿದರ್ಶನಗಳಿವೆ. ಅವರ ಹತ್ತಿರ ಬಹಳ ಒಳ್ಳೆಯ ಉತ್ತರ ಇದೆ. ನಾನು ಹೋಗಿ ಏಕೆ ಹಾಕಿಲ್ಲವೆಂದು ಕೇಳಿದೆ. ತಾವು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಾಗಿದ್ದೀರಿ. ಕೇಳಿದಾಗ ಅಲ್ಲಿ ನೀರೇ ಬರುವುದಿಲ್ಲ, ನಾವೇನು ಮಾಡುವುದು ಎಂದು ಹೇಳುತ್ತಾರೆ. ನೋಡಿ, ಅವರ ಉತ್ತರ ಎಷ್ಟು ಚೆನ್ನಾಗಿದೆ. ಈ ಒಳಚರಂಡಿ ಮಂಡಳಿಯಿಂದ ಅವರಿಗೆ ಏನೂ ಉಪಯೋಗವಾಗುತ್ತಾ ಇಲ್ಲ. ಜೊತೆಗೆ ಅಲ್ಲಿರತಕ್ಕ ಬಹಳಷ್ಟು ಜನ ಅಧಿಕಾರಿಗಳು ಡೆಪ್ಯುಟೇಶನ್ ಮೇಲೆ ಹೊಗಿದ್ದಾರೆ. ಈವತ್ತು ಈ ರೀತಿ ಮಾಡುತ್ತಿರತಕ್ಕ ಮಸೂದೆಗೆ ತಾವು ತಿದ್ದುಪಡಿ ತಂದಿದ್ದೀರಿ. ಮುನಿಸಿಪಲ್ ಡೈರೆಕ್ಟರ್ ಅಲ್ಲಿ ಇರಲಿಲ್ಲ ಎಂದು ಹೇಳಿ, ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅವರನ್ನು ಸದಸ್ಯರನ್ನಾಗಿ ಮಾಡಬೇಕೆಂದು ತಿದ್ದುಪಡಿ ತಂದಿದ್ದೀರಿ. ಇದರಿಂದ ಏನೂ ಉಪಯೋಗವಾಗುವುದಿಲ್ಲ. ನಿಮಗೆ ಮೆಜಾರಿಟಿ ಇದೆ ಪಾಸ್ ಮಾಡಿಕೊಂಡು ಹೋಗುತ್ತೀರಿ, ಅಷ್ಟೆ. ಆದ್ದರಿಂದ ನಾನಾದರೂ ಈ ಸಂದರ್ಭದಲ್ಲಿ ಒತ್ತಾಯ ಮಾಡುವುದು ಏನೆಂದರೆ ನಾನು ಏಕೆ ಈ ಸದನದ ಸಮಯವನ್ನು ಉಪಯೋಗಿಸಿಕೊಂಡೆ ಎಂದರೆ, ಎರಡು ವಿಚಾರ ಹೇಳುವುದಕ್ಕೆ. ತಾವು ದಯವಿಟ್ಟು ಜಿಲ್ಲಾವಾರು ಫಂಕ್ಷನಿಂಗ್ ರಿವ್ಯೂ ಮಾಡಿ, ಇವರ ಹಣಕಾಸಿನ ವಿಚಾರಗಳ ಬಗ್ಗೆ ರಿವ್ಯೂ ಮಾಡಿ. ನೀವು ಒಂದು ವರ್ಷ ಇರುತ್ತೀರೋ ಒಂದೂವರೆ ವರ್ಷ ಇರುತ್ತೀರೋ, ಕೊನೆಯಪಕ್ಷ 1994ರ ನವೆಂಬರ್‌ವರೆಗೆ ನೀವು ಇರಬೇಕೆಂಬುದೇ ನಮ್ಮ ಆಸೆ. ಈ ಸಂದರ್ಭದಲ್ಲಿ ಇಷ್ಟು ಕೆಲಸ ಮಾಡಿ. ಎಲ್ಲಾ ಜಿಲ್ಲೆಗಳಲ್ಲಿರತಕ್ಕ ಒಳಚರಂಡಿ ಮಂಡಳಿ ಆಡಳಿತದಲ್ಲಿ ಬರತಕ್ಕಂಥ ಪಟ್ಟಣ ಪ್ರದೇಶಕ್ಕೆ ಒಂದು ಯೋಜನೆ ತಯಾರು ಮಾಡಿ. ನನಗೆ ಗೊತ್ತಿರುವ ಹಾಗೆ ನಮ್ಮ ರಾಜಶೇಖರಮೂರ್ತಿಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ ಈ ಯೋಜನೆಗೆ ವಿಶೇಷವಾದ ಹಣ ಕೊಡಬೇಕು, ವಿಶ್ವ ಬ್ಯಾಂಕಿನ ಸಹಾಯ ಪಡೆಯಬೇಕು, ಎಲ್.ಐ.ಸಿ. ಹಣ ಕೊಡಬೇಕೆಂದು ಹೇಳಿದ್ದರು. ನನಗೆ ಸರಿಯಾಗಿ ಜ್ಞಾಪಕವಿಲ್ಲ, ಸುಮಾರು 250 ಕೋಟಿ ಅಥವಾ 180 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಕೊಡಬೇಕೆಂದು ಇದನ್ನು ಕಾರ್ಯಗತ ಮಾಡಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ಆಮೇಲೆ ಅದು ಏನಾಯಿತು ಎಂಬುದು ಗೊತ್ತಾಗುತ್ತಾ ಇಲ್ಲ. ಇವತ್ತು ರಾಜಶೇಖರಮೂರ್ತಿಯವರಿಗೆ ಹಣಕಾಸೂ ಇಲ್ಲ ಏನೂ ಇಲ್ಲ, ಸುಮ್ಮನೆ ಮಂತ್ರಿ ಮಾಡಿ ಕೂರಿಸಿದ್ದಾರೆ. ನಾವೇನೂ ಮಾತನಾಡುವಹಾಗೆ ಇಲ್ಲ. ನಿಮ್ಮ ಸರ್ಕಾರ ಈ ಸ್ಥಿತಿಗೆ ತಲುಪಿದೆ.

ಶ್ರೀ ಧರ್ಮಸಿಂಗ್ : ರಾಜಶೇಖರ್‌ಮೂರ್ತಿಯವರ ಬಗ್ಗೆ ಹೇಳುತ್ತಿದ್ದೀರಿ, ಚೆನ್ನಾಗಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ , ನಾನು ಮುಖ್ಯಮಂತ್ರಿಗಳಿಗೆ ಏನು ಹೇಳಿದ್ದು ಎಂದರೆ ನೋಡಿ ನೀವು ಫೈನಾನ್ಸ್ ಇಟ್ಟುಕೊಂಡು ಇಲ್ಲದೆ ಇರುವ ಪ್ರಾಬ್ಲಂ ಕ್ರಿಯೇಟ್ ಮಾಡಿಕೊಳ್ಳುತ್ತಿದ್ದೀರಿ. ಒಂದು ಗಾದೆ ಇದೆ ತನ್ನನ್ನು ನಂಬ ಪರರನ್ನು ನಂಬ ತಾನು ಕೆಟ್ಟ

ಎಂದು. ನಮ್ಮ ಮುಖ್ಯಮಂತ್ರಿಗಳು ಅವರನ್ನು ಅವರೇ ನಂಬರು, ಬೇರೆಯವರನ್ನೂ ನಂಬರು. ನೀವು ಏಕೆ ಫೈನಾನ್ಸ್ ಇಟ್ಟುಕೊಂಡಿದ್ದೀರಪ್ಪ. ಎಕ್ಸೈಜ್ ನೀವು ಏಕೆ ಇಟ್ಟುಕೊಂಡಿದ್ದೀರಿ. ಹೋಮ್ ಏಕೆ ನೀವು ಇಟ್ಟುಕೊಂಡಿದ್ದೀರಿ ಫೈನಾನ್ಸ್ ಕೊಡಿ ರಾಜಶೇಖರ್‌ಮೂರ್ತಿಯವರಿಗೆ, ಹೋಮ್ ಕೊಡಿ ಧರ್ಮಸಿಂಗ್‌ರವರಿಗೆ, ನಿಮ್ಮ ಬಗ್ಗೆ ಹೊಗಳಲಿಲ್ಲ ಎಂದು ಹೇಳಿರಿ. ನೀವು ಒಳ್ಳೆಯ ಕೆಲಸವನ್ನು ಮಾಡಿರುವುದನ್ನು, ನಿಮ್ಮ ಕೈಯಲ್ಲಿ ವೀರಪ್ಪನ್‌ನನ್ನು ಹಿಡಿಯಲಿಕ್ಕೆ ಆಗಲಿಲ್ಲ ಎನ್ನುವುದನ್ನು ನಾವು ಹೇಳಲೇ ಬೇಕಾಗುತ್ತದೆ. ಏಕೆಂದರೆ, ವೀರಪ್ಪನನ್ನು ನೀವು ಹಿಡಿಯಲಿಲ್ಲ. ಆದರೆ ಒಂದು ಮಾಡಿದ್ದೀರಿ ನೀವು ಸ್ವಲ್ಪ ಪೋಲೀಸ್ ಕಾನ್ಸ್‌ಟೇಬಲ್ಸ್ ಕಷ್ಟ, ಕಾನ್ಸಟೇಬಲ್ಸ್‌ಗೆ ಜಗಳ ಮಾಡಿ ಈ ಕಾನ್ಸ್‌ಟೇಬಲ್ಸ್ ಹೆಚ್ಚಿನ ಪ್ರಮೋಶನ್ಸ್ ಮತ್ತು ಕೆಲವು ಜನರಿಗೆ ರೆಕ್ರೂಟ್‌ಮೆಂಟ್ ಮಾಡುವಂತಹ ಕೆಲಸ ಮಾಡಿದಿರಿ ಮತ್ತು ಅಂದರಕೂ ಮಂಚಿವಾಡು. ಎಲ್ಲರನ್ನೂ ಸಮಾಧಾನ ಮಾಡಿಕೊಂಡು ತೆಗೆದುಕೊಂಡು ಹೋಗತಕ್ಕಂಥ ಕೆಲಸ ನೀವು ಮಾಡುತ್ತಾ ಇದ್ದೀರಿ. ಅದಕ್ಕೆ ನಿಮಗೆ ಹೋಮ್ ಕೊಡಬೇಕಾಗಿತ್ತು. ನಿಮ್ಮ ಮುಖ್ಯಮಂತ್ರಿಗಳು ನಿಮ್ಮನ್ನು ಕ್ಯಾಬಿನೇಟಿನಲ್ಲಿಟ್ಟುಕೊಂಡಿದ್ದಾರೆ ಅಷ್ಟೇ. ನಿಮ್ಮ ಬಗ್ಗೆ ಅವರಿಗೆ ವಿಶ್ವಾಸ ಕಡಿಮೆ. ಅದನ್ನು ನಾನು ಇಲ್ಲಿ ಹೇಳುವುದರಲ್ಲಿ ಏನು ತಪ್ಪು ಇದೆ. ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥಾದ್ದರಲ್ಲಿ ಏನು ತಪ್ಪು ಇದೆ. ನಾನಾದರೂ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಈ ಸರಬರಾಜು ಮಂಡಳಿಗೆ ನೀವು ತಂದಿರತಕ್ಕಂಥ ತಿದ್ದುಪಡಿಯಿಂದ ಏನೂ ಉಪಯೋಗ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಖಾತೆ ಹಂಚಿಕೆ ಬಗ್ಗೆ ಜಗಳ ಆಗಿ ಹೋಯಿತಲ್ಲಾ. ಎಕ್ಸೈಜ್ ಪೋರ್ಟ್‌ಫೋಲಿಯೋಗೋಸ್ಕರ ನನಗೆ ಬೇಕು ನನಗೆ ಬೇಕು ಎಂದು ಕಿತ್ತಾಡಿ ಏನೇನು ಆಯಿತು ಎಂದು ಗೊತ್ತಿದೆಯಲ್ಲಾ, ಒಬ್ಬರು ರಾಜೀನಾಮೆ ಕೊಟ್ಟು ಮನೆಗೆ ಹೋದರು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಗೊತ್ತಿಲ್ಲ ನನಗೆ. ಅದು ಅವರ ಇಂಟರ್‌ನಲ್ ಅಫೇರ್ಸ್ ಏನಾದರೂ ಮಾಡಿಕೊಳ್ಳಲಿ. ತಾವು ರಿಪ್ಲೈ ಮಾಡಬೇಕು ಮತ್ತು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿ ಸಹ It is connected with the drainage system ಬರೀ ಅವರು ಏನು ಮಾಡುತ್ತಾರೆಂದರೆ, ಯಾರೋ ಒಬ್ಬ ಜೂನಿಯರ್ ಇಂಜಿನಿಯರ್ ಹೋಗಿ ಬಿಟ್ಟು 10 ಬೋರ್‌ವೆಲ್ಸ್ ಹಾಕುವುದು, ಒಂದು ಟ್ಯಾಂಕ್ ಕಟ್ಟತಕ್ಕಂಥದ್ದು ಇಷ್ಟೇ ಹೇಳುತ್ತಾರೆ. ಇದರಿಂದ ಉಪಯೋಗ ಆಗುವುದಿಲ್ಲ. ಒಂದು 10-15 ವರ್ಷಕ್ಕೆ ಉಪಯೋಗವಾಗತಕ್ಕಂಥ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು ಮತ್ತು ಡ್ರೈನೇಜ್ ಸಿಸ್ಟಂ ಆಗಬೇಕು. ಈಗ ನೋಡಿ ನಾನು ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಕನಕಪುರ ಪುರಸಭೆಯಲ್ಲಿ 10 ವರ್ಷ ಒಂದೇ ಸಮನೆ ನಾನು ಅಧಿಕಾರಿಗಳಿಗೆ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಹಣ ತೆಗೆದುಕೊಂಡು ಬರುತ್ತೇವೆ ಆ ಯೋಜನೆಗೆ ಮಂಜೂರಾತಿ ಕೊಡಿಸೋಣ ಒಂದು ಯೋಜನೆ ಮಾಡಿರಿ ಎಂದು. ಅಂದರೆ ಅರ್ಕಾವತಿ ಹೊಳೆಗೆ ಕಂಪ್ಲೀಟ್ ಗಟ್ಟರಿಂದ ನೀರನ್ನೆಲ್ಲಾ ಬಿಟ್ಟಿದ್ದಾರೆ. ಇದು ಬರೀ ಕನಕಪುರದ್ದು ಅಲ್ಲ, ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಈ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾನು ಏನು ಮನವಿ ಮಾಡಿಕೊಳ್ಳುತಿದ್ದೇನೆಂದರೆ, ಕನೆಕ್ಟೆಡ್ ವಿತ್ ಡ್ರಿಂಕಿಂಗ್ ವಾಟರ್, ಒಳಚರಂಡಿ ಇರತಕ್ಕಂಥ ಒಂದು ಪ್ಲಾನನ್ನು ತಾವು ತಯಾರು ಮಾಡಬೇಕೆಂದು ನಾನು ಹೇಳುತ್ತೇನೆ ಮತ್ತು ಈ ತಿದ್ದುಪಡಿಗಿಂತ ಹೆಚ್ಚಾಗಿ ಅಲ್ಲಿ ಕೆಲವು ಒಳ್ಳೆಯ ಅಧಿಕಾರಿಗಳು ಇದ್ದಾರೆ, ಕೆಲಸ ಮಾಡತಕ್ಕಂಥವರು ದಕ್ಷರಿದ್ದಾರೆ, ಪ್ರಾಮಾಣಿಕರು ಇದ್ದಾರೆ ಅವರಿಗೆ ದುಡ್ಡು ಇಲ್ಲ ಅವರು ಏನು ಮಾಡುತ್ತಾರೆಂದರೆ ವರ್ಷಕ್ಕೆ ನಾಲ್ಕು ಕೋಟಿ, 10 ಕೋಟಿ ಸರ್ಕಾರದಿಂದ ಕೊಡುತ್ತಾರೆ, ಕೇಂದ್ರ ಸರ್ಕಾರದಿಂದ ಮತ್ತು ಇತರೆ ಯೋಜನೆಗಳಿಂದ 15 ಕೋಟಿ ರೂಪಾಯಿ ಬರುತ್ತದೆ, ಅಷ್ಟರಲ್ಲಿ ಅವರು ಮಾಡಬೇಕು. ಇದು ಯಾವ ಕಡೆ ಸಾಕಾಗುತ್ತದೆ. ಅದು ಸಾಕಾಗುವುದಿಲ್ಲ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು. ಈಗ ಇನ್ನೊಂದು ಸಮಸ್ಯೆ ಆಗಿದೆ. ಸ್ಕೇರ್‌ಸಿಟಿಯಲ್ಲಿ

ಮತ್ತೊಂದರಲ್ಲಿ ಮಗದೊಂದರಲ್ಲಿ ನಾವು ಏನು ಮಾಡುತ್ತಿದ್ದೇವೆಂದರೆ, ಹಳ್ಳಿಗಳ ಪ್ರದೇಶಕ್ಕೆ ಮತ್ತು ಗ್ರಾಮೀಣ ಪ್ರದೇಶಕ್ಕೆ ಬೇಕಾಗಿರತಕ್ಕಂಥ ಬೋರ್‌ವಲ್‌ಗಳನ್ನು ಮಾಡುತ್ತೇವೆ. ಮಿನಿ ವಾಟರ್ ಸಪ್ಲೈ ಮಾಡುತ್ತೇವೆ. ಎ.ಆರ್.ಡಬ್ಲ್ಯು, ಎಸ್.ಎನ್.ಆರ್.ಡಬ್ಲ್ಯು.ಎಸ್ ಮಾಡುತ್ತೇವೆ. ಆದರೆ ಪಟ್ಟಣದ ಪ್ರದೇಶದ ಜನಗಳಿಗೆ ನಾವು ಏನೂ ಮಾಡುವುದಕ್ಕೆ ಆಗುತ್ತಿಲ್ಲ. ಮತ್ತೆ ಮಾನ್ಯ ಘೋರ್ಪಡೆಯವರು ಹೇಳಿದಹಾಗೆ ಗ್ರೌಂಡ್ ವಾಟರ್ ಟೇಬಲ್ ಬಹಳ ಕೆಳಗೆ ಹೋಗುತ್ತಿದೆ. ಆದ್ದರಿಂದ ನೀವು ಬೇರೆ ಕಡೆಯಿಂದ ನೀರನ್ನು ತೆಗೆದುಕೊಂಡು ಬಂದು ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕಾಗುತ್ತದೆ.

ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಎರಡನೆಯದಾಗಿ ಒತ್ತಾಯ ಮಾಡುವುದೇನೆಂದರೆ, ಆರ್ಥಿಕವಾಗಿ ಸದೃಢ ಮಾಡಲಿಕ್ಕೆ, ಸ್ವಲ್ಪ ಹಣಕಾಸನ್ನು ಹೆಚ್ಚಿಗೆ ತರಲಿಕ್ಕೆ ಈ ಪಕ್ಷ ರಾಜಕೀಯದಿಂದ ಸ್ವಲ್ಪ ದೂರ ಉಳಿಯತಕ್ಕಂಥ ಮಂತ್ರಿಗಳು ದಯವಿಟ್ಟು ದೂರ ಇದ್ದು ಡೆಲ್ಲಿಗೆ ಹೋಗಿ ಎಲ್.ಐ.ಸಿ.ಯವರ ಜೊತೆಯಲ್ಲಿ ಮಾತನಾಡಿ ಬೇರೆ ಬೇರೆ ಏಜೆನ್ಸಿಯವರ ಜೊತೆಯಲ್ಲಿ ಮಾತನಾಡಿ, ವಿಶ್ವಬ್ಯಾಂಕ್‌ನವರ ಜೊತೆಯಲ್ಲಿ ಮಾತನಾಡಿ, ಸ್ವಲ್ಪ ಹಣ ಕೊಡಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಇದರ ಬಗ್ಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಮಾನ್ಯ ಅಧ್ಯಕ್ಷರೆ ಮತ್ತೊಂದು ವಿಚಾರವನ್ನು ನಾನು ಈ ವಿಧೇಯಕದ ಬಗ್ಗೆ ಹೇಳುತ್ತೇನೆ. ಈ ವಿಧೇಯಕವನ್ನು ನಾನು ವಿರೋಧ ಮಾಡುವುದಕ್ಕಿಂತ ಮುಂಚೆ ಮತ್ತೊಂದು ಏನೆಂದು ಹೇಳಿದರೆ, ಈ ವಾಟರ್ ಸಪ್ಲೈ ಸ್ಕೀಮ್ಸು ಇದೆ ದೊಡ್ಡ ದೊಡ್ಡ ಸ್ಕೀಮ್ಸುಗಳು ಇವೆ. ಮಧ್ಯದಲ್ಲಿ ಬರತಕ್ಕಂಥ ಎಲ್ಲಾ ಹಳ್ಳಿಗಳಿಗೂ ಸಹ ಈ ಸ್ಕೀಮ್ಸ್‌ನಿಂದ ನಾವು ನೀರು ಕೊಡಬೇಕೆಂದು ಮುಂಚೆಯಿಂದ ಹೇಳುತ್ತಿದ್ದೇವೆ. ಏಕೋ ಅದು ಆಗುತ್ತಿಲ್ಲ. ಆದರ ಕಡೆಯೂ ತಾವು ಗಮನ ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಈ ವಿಧೇಯಕವನ್ನು ನಾನು ವಿರೋಧ ಮಾಡುತ್ತಿದ್ದೇನೆ.

* ಶ್ರೀ ಕೆ. ಎಸ್. ಈಶ್ವರಪ್ಪ : (ಶಿವಮೊಗ್ಗ) ಮಾನ್ಯ ಅಧ್ಯಕ್ಷರೇ, ಈ ಒಳಚರಂಡಿಗಳಲ್ಲಿ ನಗರಾಭಿವೃದ್ಧಿ ಇಲಾಖೆ ಮುಚ್ಚಿಹೋಗಿದೆ ಎಂದು ನನಗನಿಸುತ್ತಿದೆ. ಏಕೆಂದರೆ ಒಳಚರಂಡಿ ಯೋಜನೆ ಆಗಲಿ. ಕುಡಿಯುವ ನೀರಿನ ಯೋಜನೆಗಳು ಆಗಲಿ ಬೇರೆ ಯೋಜನೆಗಳು ಈ ಸರ್ಕಾರ ಪ್ರಾರಂಭ ಮಾಡುವಾಗ ಒಂದು ಉತ್ಸಾಹದಲ್ಲಿ ಪ್ರಾರಂಭ ಮಾಡುತ್ತದೆಯೇ ವಿನಃ ಆ ಯೋಜನೆ ಮುಗಿಸುವ ಬಗ್ಗೆ ಗಮನ ಕೊಡುತ್ತಿಲ್ಲ. ನಾನು ಚಿಕ್ಕವನಿರ ಬೇಕಾದರೆ ನಾನು ಓದುವ ಸಂದರ್ಭದಲ್ಲಿ ಶಿವಮೊಗ್ಗ ಒಳಚರಂಡಿ ಯೋಜನೆ ಪ್ರಾರಂಭವಾಯಿತು. ನಾನು ಎಲ್ಲಾ ಮುಗಿಸಿ ಶಾಸಕನಾಗಿ ಬಂದರೂ ನಮ್ಮ ಶಿವಮೊಗ್ಗ ಜನ ಆ ಒಳಚರಂಡಿ ಯೋಜನೆ ಏನಾಯಿತು ಎಂದು ಇವತ್ತೂ ಕೇಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಒಳಚರಂಡಿಯೊಳಗೆ ಈ ನಗರಸಭೆ ಮತ್ತು ಪುರಸಭೆಗಳು ಮುಚ್ಚಿಹೋಗುತ್ತಿವೆಯೆಂದು ಹೇಳಿದ್ದುದು. ಈಗ ತಾವು ಇದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದು ಪುರಸಭೆಯ ನಿರ್ದೇಶಕರನ್ನು ಆ ಸಮಿತಿ ಒಳಗೆ ಸೇರಿಸುವ ಕೆಲಸ ಮಾಡುತ್ತಿದ್ದೀರಿ. ಇದು ಏತಕ್ಕೆ ಸ್ವಾಮಿ? ಈಗ ತಾನೇ ನನಗೆ ಮನೆಗಂದಾಯ ಸರಿಯಾಗಿ ನಿಗದಿ ಮಾಡಿಲ್ಲದೆ ಇರುವ ಬಗ್ಗೆ ಉತ್ತರ ಕೊಟ್ಟಿದ್ದೀರಿ. ಇಡೀ ರಾಜ್ಯದಲ್ಲಿ ಮನೆಗಂದಾಯ ಒಂದೇ ರೂಪದಲ್ಲಿ ಇಲ್ಲ. ಒಂದೇ ತರಹದ ಎರಡು ಮನೆಗೆ ಒಂದಕ್ಕೆ 300 ರೂಪಾಯಿ ಇದ್ದರೆ ಇನ್ನೊಂದಕ್ಕೆ 3 ಸಾವಿರ ರೂಪಾಯಿ ಹಾಕಿದ್ದಾರೆ. ನಾನು ಶಾಸಕನಾಗಿ ಬಂದಾಗಿನಿಂದಲೂ ಕೇಳುತ್ತಿದ್ದೇನೆ ಈ ಮನೆಗಂದಾಯ ಗಳನ್ನು ಒಂದೇ ರೀತಿಯಲ್ಲಿ ಹಾಕುವ ಬಗ್ಗೆ ಒಂದು ನೀತಿಯನ್ನು ರೂಪಿಸಿ ಎಂದು. ಇವತ್ತಿನವರೆಗೂ ಮನೆಗಂದಾಯ ನಿಗದಿ ಮಾಡುವ ಬಗ್ಗೆ ಏನೂ ಆಗಿಲ್ಲ. ಆದರೆ ಇದರ ಬಗ್ಗೆ ಒಂದು ಸಮಿತಿಯನ್ನು ದಿನಾಂಕ: 16-5-90ರಲ್ಲಿ ಮಾಡಿದ್ದಾರೆ. ಆ ಸಮಿತಿ ನೇಮಕ ಮಾಡಿದ 3 ವರ್ಷಗಳಲ್ಲಿ ಅದು ಇದುವರೆಗೆ 3 ಸಾರಿ ಮಾತ್ರ ಸಭೆ ಸೇರಿದೆ. ಈ ತಿದ್ದುಪಡಿಯಿಂದ ಅಧಿಕಾರಿಗಳಿಗೆ ಸ್ಥಾನ ಕೊಡಬೇಕು ಎನ್ನುವ ಉದ್ದೇಶದಿಂದ ತರಲಾಗಿದೆ ಎಂದು

ನಮಗನಿಸುತ್ತದೆ. ನಾನು ಈ ಸರ್ಕಾರಕ್ಕೆ ಒಂದು ವಿಷಯದಲ್ಲಿ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಅಂದರೆ 3 ವರ್ಷದ ಕೆಳಗೆ ನಮ್ಮ ಶಿವಮೊಗ್ಗದಲ್ಲಿ ಕುಡಿಯುವ ನೀರಿನ ಯೋಜನೆ ಪ್ರಾರಂಭವಾಯಿತು. ಅದು 5 ಕೋಟಿ ರೂಪಾಯಿಗಳ ಯೋಜನೆ. ಆದರೆ ಇದುವರೆಗೂ ಹಣ ಬಿಡುಗಡೆಯಾಗಲಿಲ್ಲ. ಮೊನ್ನೆ ಕೆಲವು ದಿವಸಗಳ ಹಿಂದೆ ನಗರಾಭಿವೃದ್ಧಿ ಸಚಿವರಾದ ಚೌಡರೆಡ್ಡಿಯವರು ಆ ಯೋಜನೆಗೆ 48 ಲಕ್ಷ ರೂಪಾಯಿಗಳನ್ನು ಬಿಡುಗಡೆಗೆ ಮಾಡಿದರು. ಆದ್ದರಿಂದ ನಾನು ಹೇಳುತ್ತೇನೆ, ಈ ಸಮಿತಿಗೆ ಯಾರನ್ನೇ ಸದಸ್ಯರನ್ನಾಗಿ ಸೇರಿಸಿದರೂ ಉಪಯೋಗವಾಗಲಿಕ್ಕಿಲ್ಲ. ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಸರ್ಕಾರಕ್ಕೆ ಮನಸ್ಸು ಇದ್ದಾಗ ಮಾತ್ರ ಕೆಲಸಗಳು ಆಗುತ್ತವೆ. ಸುಮ್ಮನೆ ಯಾರು ಯಾರನ್ನೋ ಸಮಿತಿಗಳಿಗೆ ಹಾಕುವುದರಿಂದ ಯಾವ ಕೆಲಸಗಳೂ ಆಗುವುದಿಲ್ಲ. ಯಾರಿಗೂ ಸ್ಥಾನಗಳನ್ನು ಒದಗಿಸುವುದಕ್ಕಾಗಿ ಇಂಥಾ ವಿಧೇಯಕಗಳನ್ನು ತರಬೇಡಿ. ಈ ರೀತಿ ಪೌರಾಡಳಿತ ನಿರ್ದೇಶಕರನ್ನು ಈ ಸ್ಥಾನದಲ್ಲಿ ತುಂಬುವುದಕ್ಕಿಂತಲೂ ಸ್ಥಳೀಯ ನಗರ ಸಭೆಯ ಅಧ್ಯಕ್ಷರು ಮತ್ತು ಶಾಸಕರುಗಳನ್ನು ಆಯಾ ಜಿಲ್ಲೆಯ ಕೇಂದ್ರಗಳಲ್ಲಿ ಸಭೆಯನ್ನು ಕರೆಯಿರಿ. ಸಭೆ ಕರೆದು ಯೋಜನೆಗಳು ಯಾವ ಮಟ್ಟದಲ್ಲಿ ಇವೆಯೆಂದು ವಿಚಾರಿಸಿ. ಆ ಯೋಜನೆಗಳನ್ನು ಮುಗಿಸುವುದಕ್ಕೆ ಏನು ತೊಂದರೆ ಇದೆಯೆಂದು ಕೇಳಿ. ಅದು ಬಿಟ್ಟು ಇರುವ ಎಲ್ಲಾ ನಿರ್ದೇಶಕರುಗಳನ್ನು ಮತ್ತು ಅಫಿಷಿಯಲ್ಸನ್ನು ಅಲ್ಲಿಗೆ ಹಾಕಿದರೂ ಖಂಡಿತ ಯೋಜನೆಗಳಿಗೆ ಲಾಭವಾಗಲಿಕ್ಕಿಲ್ಲ ಮತ್ತು ಜನತೆಗೆ ಉಪಯೋಗವಾಗುವುದಿಲ್ಲ. ಯಾರು ಇದರಲ್ಲಿ ಅನುಭವ ಶಾಲಿಗಳಿದ್ದಾರೋ ಅವರುಗಳನ್ನು ಕರೆಯಿಸಿ ಯೋಜನೆಗಳನ್ನು ಅನುಷ್ಠಾನ ಮಾಡುವಲ್ಲಿ ಏನು ತೊಂದರೆಗಳು ಇವೆಯೆಂದು ತಿಳಿದುಕೊಂಡು ಪರಿಹಾರ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ನಗರ ಸಭೆಯ ಅಧ್ಯಕ್ಷರನ್ನು ಮತ್ತು ಶಾಸಕರುಗಳನ್ನು ಸಭೆಗೆ ಕರೆಯಿರಿ, ಅವರ ಅಭಿಪ್ರಾಯಗಳನ್ನು ಪಡೆದು ಕೆಲಸವನ್ನು ಮಾಡಿಸಿರಿ. ಆಗ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದು ಬಿಟ್ಟು ಪೌರಾಡಳಿತ ನಿರ್ದೇಶಕರುಗಳನ್ನು ಇದರಲ್ಲಿ ಹಾಕಬೇಡಿ. ಅವರನ್ನು ಹಾಕುವುದರಿಂದ ಲಾಭ ಆಗುವುದಕ್ಕಿಂತ ನಷ್ಟವಾಗುತ್ತದೆ, ಹೆಚ್ಚು ಖರ್ಚು ಬೀಳುತ್ತದೆ. ಅದಕ್ಕೋಸ್ಕರ ಈ ವಿಧೇಯಕವನ್ನು ನಾನು ವಿರೋಧ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ ಈ ಒಂದು ವಿಧೇಯಕ ಬಹಳ ಸೀಮಿತವಾಗಿದೆ. ಒಬ್ಬ ಸದಸ್ಯನನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸೀಮಿತವಾಗಿದೆ. ಇದರ ಹಿಂದೆ ಇರುವ ಉದ್ದೇಶ ಸೀಮಿತವಾಗಿದ್ದರೂ ಕೆಲವು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕಾಗುತ್ತದೆ. ಈ ಹಿಂದೆ ಕರ್ನಾಟಕದ ಸುಮಾರು 22 ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರು ಯೋಜನೆ ತರಬೇಕೆಂದು ಪ್ರಾರಂಭವಾಯಿತು. ಅದರಲ್ಲಿ ಬೆಳಗಾವಿ, ಗದಗ್, ಚಾಮರಾಜನಗರ, ಶಿವಮೊಗ್ಗ ಸೇರಿದೆ. ಶ್ರೀಮಾನ್ ರಾಜಶೇಖರ್ ಮೂರ್ತಿಯವರು ಆಗ ಹಣಕಾಸು ಸಚಿವರಾಗಿದ್ದರು. ಈಗ ಅವರು ಕಂದಾಯ ಸಚಿವರಾಗಿದ್ದಾರೆ. ಅವರು ಹಣಕಾಸು ಸಚಿವರಾಗಿದ್ದಾಗ, ಕರ್ನಾಟಕ ಒಳಚರಂಡಿ ಮತ್ತು ನೀರು ಸರಬರಾಜು ಇಲಾಖೆಯ ಅಧಿಕಾರಿಗಳನ್ನು ಕರೆದು, ನೀವು ಯೋಜನೆಗಳನ್ನು ಸಿದ್ಧಪಡಿಸಿ, ಟೆಂಡರುಗಳನ್ನು ಕರೆದು ಕೆಲಸ ಪ್ರಾರಂಭ ಮಾಡಿ, ಅದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನೂ ಕೊಡುತ್ತೇನೆಂದು ಧೈರ್ಯವಾಗಿ ಹೇಳಿದ ಹಣಕಾಸು ಸಚಿವರಾಗಿದ್ದರು. ಬೋಡಮ್ಮ ತುರುಬು ನೆನಸಿಕೊಂಡ ಹಾಗೆ ನಾವು ಅದನ್ನು ನೆನಸಿಕೊಳ್ಳುತ್ತಿದ್ದೇವೆ. ಈಗ ಅವರು ಹಣಕಾಸು ಸಚಿವರೂ ಆಗಿಲ್ಲ, ಹಣವನ್ನೂ ಕೊಟ್ಟಿಲ್ಲ. ಮಾನ್ಯ ಚೌಡರೆಡ್ಡಿಯವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಶಾಸಕರಾಗುವುದಕ್ಕೆ ಮೊದಲು ಪುರಸಭೆ ಮತ್ತು ಮುನಿಸಿಪಲ್ ಅಧ್ಯಕ್ಷರಾಗಿ ಪಟ್ಟಣಗಳಲ್ಲಿ ಯಾವ ಪರಿಸ್ಥಿತಿ ಇದೆಯೆಂದು ಅರ್ಥಮಾಡಿಕೊಂಡಿದ್ದಾರೆ. ಈ ಮೊದಲು 20 - 22 ಪಟ್ಟಣ ಪ್ರದೇಶಗಳಲ್ಲಿ ಒಳಚರಂಡಿ ಮತ್ತು ನೀರು ಸರಬರಾಜು ಯೋಜನೆಗಳು

ಪ್ರಾರಂಭವಾದವು, ಈ ಕ್ಷಣದವರೆಗೂ ತೀವ್ರ ಬಾಲಗ್ರಹ ಪೀಡಿತವಾಗಿ ಕುಳಿತಿವೆ. ಆ ಯೋಜನೆಗಳ ಕೆಲಸ ಆಗುವ ಪರಿಸ್ಥಿತಿಯಲ್ಲಿ ಇಲ್ಲ. ಜನಗಳ ಮುಂದೆ ಇದನ್ನು ಹೇಳಬೇಕಾದರೆ ನಮಗೆ ನೋವಾಗುತ್ತದೆ. ಈ ಯೋಜನೆಗಳೆಲ್ಲಾ ಪ್ರಾರಂಭವಾಗಿ 3 ವರ್ಷಗಳಾಗುತ್ತಾ ಬರುತ್ತಿವೆ. ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆಗಳನ್ನು ಮಾಡಲಾಯಿತು. ಮಾನ್ಯ ವೀರೇಂದ್ರ ಪಾಟೀಲರು ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಹೋಗಿ, ಈ ಯೋಜನೆಗಳಿಗೆ ಶಂಕುಸ್ಥಾಪನೆಯನ್ನು ಮಾಡಿ ಬಂದಿದ್ದಾರೆ. ಅವರು ಸುಮಾರು 10-12 ಯೋಜನೆಗಳಿಗೆ ಶಂಕುಸ್ಥಾಪನೆ ಮಾಡಿದರು. ಆದಾದ ನಂತರ ಬಂದಂಥ ಮುಖ್ಯಮಂತ್ರಿಗಳೂ ಶಂಕುಸ್ಥಾಪನೆ ಮಾಡಿದರು. ಈ ಯೋಜನೆಗಳಿಗೆ ಬೇಕಾದ ಹಣವನ್ನು ಜೀವವಿಮೆ ಇಲಾಖೆಯಿಂದ ಪಡೆಯುತ್ತೇವೆ ಮಿಕ್ಕ ಹಣವನ್ನು ಸರ್ಕಾರದಿಂದ ಕೊಡುತ್ತೇವೆಂದು ಹೇಳಿದರು. ಪಾಪ ಆ ಮಂಡಳಿಯವರು ಏನು ಮಾಡುತ್ತಾರೆ? ಅವರ ಹತ್ತಿರ ದುಡ್ಡು ಇಲ್ಲ. ಅವರ ಹತ್ತಿರ ನೀರು ಸರಬರಾಜು ಮಾಡಲಿಕ್ಕೆ ಕೊಳವೆ ತರಿಸಲು ದುಡ್ಡು ಇಲ್ಲ. ನೀರಿನ ಟ್ಯಾಂಕುಗಳನ್ನು ಕಟ್ಟುವುದಕ್ಕೆ ದುಡ್ಡು ಇಲ್ಲ. ಯೋಜನೆಯಂತೂ ಉಳಿದಿದೆ. ಅದಕ್ಕೆ ಆಡಳಿತಾತ್ಮಕ ಅನುಮತಿಯನ್ನು ಪಡೆದಿದ್ದಾರೆ ಮತ್ತು ಈ ಸದನದಲ್ಲೂ ಆ ಯೋಜನೆಗಳಿಗೆ ಅನುಮತಿಯನ್ನು ಕೊಡಲಾಗಿದೆ. ಆದರೆ ಕೆಲಸಗಳು ಮಾತ್ರ ಆಗುತ್ತಿಲ್ಲ. ನಾನು ಮಾನ್ಯ ಚೌಡರೆಡ್ಡಿಯವರಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಇದು ಸೀಮಿತವಾಗಿದ್ದರೂ, ಈ ಯೋಜನೆಗಳನ್ನು ಯಾವಾಗ ಮುಗಿಸುತ್ತೀರಿ? ಈ ಯೋಜನೆಗಳನ್ನು ಮುಗಿಸುವುದು ನಿಜವೇ? ಖಂಡಿತಾ ಕೆಲಸವನ್ನು ಮುಗಿಸುತ್ತೀರಾ? ಅಥವಾ ಕೈ ಬಿಟ್ಟಿದ್ದೀರಾ? ಇದನ್ನು ತಾವು ಸ್ಪಷ್ಟಪಡಿಸಬೇಕು. ಚಾಮರಾಜನಗರಕ್ಕೆ ನೀರು ಸರಬರಾಜು ಮಾಡಬೇಕೆಂದು ಕೇಳಿ ಕೇಳಿ ಕಡೆಗೆ ನಾನೇ ಕೊಳವೆ ತಯಾರು ಮಾಡುವ ದಾವಣಗೆರೆಗೆ ಹೊಗಿದ್ದೆ. ಕೊಳವೆ ತಯಾರು ಮಾಡುವವರನ್ನು ಚಾಮರಾಜನಗರಕ್ಕೂ ಕರೆದುಕೊಂಡು ಬಂದಿದ್ದೆ ಮಾಡುವವರಿಗೆ ಕರ್ನಾಟಕ ಹಣಕಾಸು ಸಂಸ್ಥೆಯಿಂದ ಹಣಕಾಸಿನ ನೆರವನ್ನೂ ಕೊಡಿಸಿದೆ. ಇದರ ಬಗ್ಗೆ ನಿಮ್ಮ ಇಲಾಖೆಯ ಅಧಿಕಾರಿಗಳು ನಿಮಗೆ ಹೇಳಿರಬೇಕು. ಚಾಮರಾಜನಗರದಲ್ಲಿ ಕುಡಿಯುವ ನೀರಿಗೆ ಪಡುತ್ತಿರುವ ತೊಂದರೆಯನ್ನು ನೋಡಿ ಈ ಹಿಂದೆ ಮಾನ್ಯ ರಾಜಶೇಖರಮೂರ್ತಿಯವರು ಈ ಯೋಜನೆಗೆ ಒಪ್ಪಿಗೆ ಕೊಟ್ಟಿದ್ದರು. ಅದರಂತೆ ಬೆಳಗಾಂಗೂ ಒಪ್ಪಿಗೆಯನ್ನು ಕೊಟ್ಟಿದ್ದರು. ಆದರೆ ಕೆಲಸ ಮಾತ್ರ ಆಗಲಿಲ್ಲ. ಈ ಚುನಾವಣೆ ಬರುವುದರೊಳಗಾಗಿ ಈ ಯೋಜನೆಯನ್ನು ಪೂರ್ತಿ ಮಾಡಿಸಿಕೊಡಬೇಕು. ನಿಮ್ಮ ಕಾಲದಲ್ಲಾದರೂ ಬೇಗ ಮುಗಿಸುವುದಕ್ಕ ಹಣದ ವ್ಯವಸ್ಥೆಯನ್ನು ಮಾಡಿ. ಕಾವೇರಿ ಮತ್ತು ಕಪಿಲಾ ನದಿಯಿಂದ 40 ಕಿಲೋಮೀಟರ್ ದೂರ ಇರುವ ಚಾಮರಾಜ ನಗರಕ್ಕೆ ನೀರು ಸರಬರಾಜು ಮಾಡಲು ಕೆಲವು ಕಡೆ ಪೈಪುಗಳನ್ನು ಹಾಕಿರುವುದನ್ನು ನೋಡಿ ನಾವು ಸ್ವಲ್ಪ ಉಸಿರಾಡುತ್ತಿದ್ದೇವೆ . ಆಮೇಲೆ ಈ ಯೋಜನೆಗಳ ಮುಖಾಂತರ ಕರ್ನಾಟಕ ರಾಜ್ಯದ ಯಾವ ಯಾವ ಪಟ್ಟಣ ಪ್ರದೇಶಗಳಲ್ಲಿ ಮಾಡಿಸುತ್ತೀರಿ? ಈ ಯೋಜನೆಗಳನ್ನು ಯಾವಾಗ ಮುಗಿಸುತ್ತೀರೆಂದು ಸ್ಪಷ್ಟವಾದ ದಿನಾಂಕವನ್ನು ಪ್ರಕಟಿಸಬೇಕು. ಮತ್ತೊಂದು ಮಾತು ಹೇಳುತ್ತಿದ್ದೇನೆ. ಈ ಒಳಚರಂಡಿ ವ್ಯವಸ್ಥೆ ಇದೆಯಲ್ಲಾ, ಅದನ್ನು ಕರ್ನಾಟಕ ರಾಜ್ಯದ ಪ್ರತಿ ಪಟ್ಟಣಕ್ಕೂ ಕೊಡುವ ವ್ಯವಸ್ಥೆ ಮಾಡಿ. ಕುಡಿಯುವ ನೀರಿನ ಯೋಜನೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕರ್ನಾಟಕದ ಪ್ರತಿ ಪಟ್ಟಣ ಪ್ರದೇಶಗಳಿಗೂ ಯಾವ ರೂಪದಲ್ಲಾದರೂ ಕೊಡಿ. ವಿಶ್ವಬ್ಯಾಂಕ್‌ನಿಂದಾದರೂ ಹಣವನ್ನು ಪಡೆದು ಕೆಲಸವನ್ನು ಮುಗಿಸಿ. ಕರ್ನಾಟಕದ ಎಲ್ಲಾ ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆ ಮತ್ತು ಒಳಚರಂಡಿ ವ್ಯವಸ್ಥೆ ಮಾಡುವುದರಿಂದ ಬಹಳ ಅನುಕೂಲವಾಗುತ್ತದೆ. ಆಮೇಲೆ ಮತ್ತೊಂದು ಸಲಹೆ ಮಾಡುತ್ತಿದ್ದೇನೆ. ಕೆಲವು ಪಟ್ಟಣ ಪ್ರದೇಶಗಳ ಪಕ್ಕದಲ್ಲಿಯೇ ನದಿಗಳು ಬರುತ್ತವೆ. ಆ ನದಿಗಳಿಂದ ನೇರವಾಗಿ ನೀರನ್ನು ತೆಗೆದುಕೊಳ್ಳತಕ್ಕಂಥ ಯೋಜನೆ ಮಾಡಿ. ಕಾವೇರಿ, ಕಪಿಲ, ತುಂಗ, ಭದ್ರ ನದಿಗಳ ಪಕ್ಕದಲ್ಲಿ ಬರತಕ್ಕಂಥ ಎಲ್ಲಾ ಪಟ್ಟಣ ಪ್ರದೇಶಗಳಿಗೆ ಆಯಾ ನದಿಗಳಿಂದ ಶಾಶ್ವತವಾಗಿ ನೀರನ್ನು ತೆಗೆದುಕೊಳ್ಳತಕ್ಕಂಥ ಒಂದು ಹೊಸ ಯೋಜನೆಯನ್ನು ತಾವು ತಯಾರು

ಮಾಡಿ. ಅಲ್ಲದೆ ಈ ಯೋಜನೆಗಳನ್ನು ಗುಂಪು ,ಗುಂಪು ಹಳ್ಳಿಗಳಿಗೂ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡಿ. ಇದು ನಿಜವಾಗಿಯೂ ಒಳ್ಳೆಯ ಯೋಜನೆಯಾಗುತ್ತದೆ ಮತ್ತು ಒಂದು ಸಮಗ್ರ ಚಿಂತನೆಯಾಗುತ್ತದೆ. ಇದನ್ನು ಮಾಡುವುದಾದರೆ ಕರ್ನಾಟಕದಲ್ಲಿ ಬಹುತೇಕ ಸುಮಾರು 50 ಭಾಗ ಹಳ್ಳಿಗಳು ಮತ್ತು ಪಟ್ಟಣಗಳಿಗೆ ನೇರವಾಗಿ ಬೇಸಿಗೆ ಕಾಲದಲ್ಲೂ ನೀರು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿ, ವಿಶ್ವಬ್ಯಾಂಕ್ ಜೊತೆ ವ್ಯವಹಾರ ಮಾಡಿ ಅಥವಾ ಕೇಂದ್ರದ ಜೊತೆ ವ್ಯವಹರಿಸಿ ಹಣಕಾಸನ್ನು ಹೊಂದಿಸಿಕೊಳ್ಳಿ. ಬೆಂಗಳೂರು ನಗರಕ್ಕೆ ತೊರೆಕಾದನಹಳ್ಳಿಯಿಂದ ಕಾವೇರಿ ನೀರು ಸರಬರಾಜು ಆಗುತ್ತಿದೆ. ಒಂದು, ಎರಡು, ಮೂರನೆಯ ಹಂತದಲ್ಲಿ ನೀರನ್ನು ತರಲಾಗುತ್ತಿದೆ. ಇಲ್ಲಿ ಏನಾಗಿದೆ? ಒಬ್ಬರು ಊಟ ಮಾಡುವಂಥಾದ್ದನ್ನು ಇನ್ನೊಬ್ಬರು ನೋಡುವಂಥ ಪರಿಸ್ಥಿತಿ ಮಾಡಿದ್ದೀರಿ. ತೊರೆಕಾದನಹಳ್ಳಿ ಹತ್ತಿರದಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡಲು ಕೊಳವೆಗಳನ್ನು ಹಾಕಲಾಗಿದೆ ಆ ಕೊಳವೆ ಹಾದು ಬಂದಿರುವ ಹಳ್ಳಿಗಳ ಕಡೆಯ ಜನರು ನೀರಿಲ್ಲದೆ ಈ ಕೊಳವೆಗಳನ್ನು ನೋಡುವಂಥ ಪರಿಸ್ಥಿತಿಯಾಗಿದೆ. ಕನಕಪುರ ತಾಲ್ಲೂಕಿಗೆ ನೀರಿಲ್ಲ. ಸಾತನೂರಿಗೆ ನೀರಿಲ್ಲ. ಈ ಪರಿಸ್ಥಿತಿ ಇರುವುದರಿಂದ ಈ ನದಿಗಳಿಂದ ನೀರನ್ನು ಅವರಿಗೂ ಒದಗಿಸಿಕೊಡಬೇಕು. ಮಾನ್ಯ ಅಧ್ಯಕ್ಷರೆ ಚಾಮರಾಜನಗರದ ಒಳಚರಂಡಿ ವ್ಯವಸ್ಥೆಯನ್ನು ಯೋಜನೆಯಲ್ಲಿ ಸೇರಿಸಿದ್ದೇವೆಂದು ತಾವು ಹೇಳಿದ್ದೀರಿ. ನೀವು ಒಳಚರಂಡಿ ವ್ಯವಸ್ಥೆಯನ್ನು ನೀವು ಕೊಡಲೇಬೇಕು. ನಾನು ಮೊದಲಿಂದಲೂ ಸುಮಾರು ವರ್ಷಗಳಿಂದಲೂ ಕೇಳಿಕೊಂಡು ಬಂದಿದ್ದೇನೆ. ದಯಮಾಡಿ ಅದನ್ನು ಕೊಡಲೇ ಬೇಕು. ಅದು ಗಡಿಯ ಪ್ರದೇಶ. ಆದ್ದರಿಂದ ನಿಮ್ಮ ಅಧಿಕಾರಿಗಳೂ ಹೇಳಿದರು, ತಾವೂ ಆಯವ್ಯಯದಲ್ಲಿ ಸೇರಿಸಿದ್ದೇವೆಂದು ಹೇಳಿದ್ದೀರಿ. ಅದನ್ನು ತಮ್ಮ ಉತ್ತರದಲ್ಲಿ ಹೇಳುವಾಗ ಒಳ್ಳೆಯ ಮಾತನ್ನು ಅಂದರೆ ತಾವು ಕೊಟ್ಟೇಕೊಡುತ್ತೇವೆಂದು ಹೇಳಿದರೆ ನಮಗೂ ಸ್ವಲ್ಪ ಸಂತೋಷವಾಗುತ್ತದೆ. ಮತ್ತು ನೀವು ಕೊಟ್ಟ ಕೆಲಸವನ್ನು ಬಹಳ ಬೇಗ ತಾವು ಕಾರ್ಯಗತ ಮಾಡಬೇಕು. ನಿರ್ದೇಶಕರನ್ನು ತಾವು ಮಂಡಲಿಗೆ ನೇಮಿಸಿಕೊಳ್ಳುವುದರಿಂದ ನಮ್ಮದೇನೂ ತಕರಾರು ಇಲ್ಲ. ಇಲ್ಲಿ ಯಾರ ಪರ, ಯಾರ ವಿರುದ್ಧ ಇಲ್ಲ. ನಿಮಗೆ ಸಪೋರ್ಟ್ ಮಾಡಬೇಕೆಂದರೆ ಸಪೋರ್ಟ್ ಕೊಡುತ್ತೇವೆ. ಅದರಲ್ಲಿ ಏನೂ ಇಲ್ಲ. ಒಬ್ಬ ಸದಸ್ಯರನ್ನು ನೇಮಿಸಿಕೊಳ್ಳುವುದರಿಂದ ನಮಗೇನಾದರೂ ಆಗುತ್ತದೆಂದು ನಾನು ತಿಳಿದುಕೊಂಡಿಲ್ಲ. ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಆ ಕೆಲಸ ಆಗಬೇಕು. ನಿಮ್ಮ ಹಣಕಾಸಿನ ಕೊರತೆ ಏನಿದೆ ಅದನ್ನು ತಾವು ಹೇಳಿ. ಹಣಕಾಸಿನ ತೊಂದರೆ ಇದ್ದರೆ ಸರ್ಕಾರ ನೀತಿ ಹೀಗಿದೆ, ನಾವು ಇಷ್ಟು ದಿನದೊಳಗಾಗಿ ಈ ಯೋಜನೆಗಳನ್ನು ಮುಗಿಸುತ್ತೇವೆ ಎನ್ನತಕ್ಕ ಭರವಸೆಯನ್ನು ಈ ಸದನಕ್ಕೆ ಕೊಡಬೇಕು ಎನ್ನತಕ್ಕ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ. ಚಾಮರಾಜನಗರದ ಒಳಚರಂಡಿ ವ್ಯವಸ್ಥೆ ಬಗ್ಗೆ ತಾವು ಖಂಡಿತವಾಗಿ ಹೇಳಲೇಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಇಂದು ಮಾನ್ಯ ನಗರಾಭಿವೃದ್ಧಿ ಸಚಿವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಕಾಯಿದೆಗೆ ತಿದ್ದುಪಡಿಯನ್ನು ತಂದಿದ್ದಾರೆ. ಈ ತಿದ್ದುಪಡಿಯಲ್ಲಿ ಬಹಳ ಪರಿಣಾಮಕಾರಿಯಾದಂತಹ ತಿದ್ದುಪಡಿಗಳು ಬಂದಿರುತ್ತವೆ, ಇದರ ಕೆಲಸಕಾರ್ಯವನ್ನು ಸುಧಾರಿಸುವುದಕ್ಕೆ ಸಾಧಕವಾಗುತ್ತದೆ ಎನ್ನತಕ್ಕಂಥ ತಿದ್ದುಪಡಿಗಳು ಬರದಿರುತ್ತವೆ ಎಂದು ನಾನು ಅಂದುಕೊಂಡಿದ್ದೆ. ಆದರೆ ಆ ತಿದ್ದುಪಡಿಯನ್ನು ತೆಗೆದು ನೋಡಿದಾಗ ಇರತಕ್ಕಂಥದ್ದು ಒಂದೇ ಒಂದು. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡೈರೆಕ್ಟರ್ ಏನಿದ್ದಾರೆ ಅವರನ್ನು ಈ ಆಡಳಿತ ಮಂಡಲಿಯ ಒಬ್ಬ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳತಕ್ಕಂಥದ್ದು. This is a very cosmetic amendment. ಇದರಲ್ಲಿ ಏನೂ ಇಲ್ಲ. ಕೊಡುವುದೂ ಇಲ್ಲ, ತೆಗೆದುಕೊಳ್ಳುವುದೂ ಇಲ್ಲ.

ಹನ್ನೊಂದಕ್ಕೆ ಇನ್ನೊಂದನ್ನು ತೆಗೆದುಕೊಳ್ಳತಕ್ಕಂಥದ್ದು. ಅಷ್ಟನ್ನು ಬಿಟ್ಟರೆ ಈ ತಿದ್ದುಪಡಿಯಲ್ಲಿ ಇನ್ನು ಯಾವ ಪರಿಣಾಮಕಾರಿಯಾದಂತಹದ್ದು, ಅದರಲ್ಲಿ ಶ್ರದ್ಧೆಯನ್ನುವಹಿಸಿರುವಂಥದ್ದು ನನಗಂತೂ ಕಂಡು ಬಂದಿಲ್ಲ. ನಾನು ಸ್ವಲ್ಪ ದಿವಸ ಆ ಮಂಡಳಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನಾನು ಹಳ್ಳಿಯಲ್ಲಿ ಹುಟ್ಟಿರತಕ್ಕಂಥವನು. ಈಗಲೂ ಕೂಡ ಹಳ್ಳಿಯಲ್ಲಿಯೇ ವಾಸಮಾಡುತ್ತಿದ್ದೇನೆ. ಹಳ್ಳಿಗಳ ಸಮಸ್ಯೆಗಳು ನನಗೆ ಪರಿಚಯ ಇದ್ದಷ್ಟು ಪಟ್ಟಣದ ಸಮಸ್ಯೆಗಳು ನನಗೆ ಪರಿಚಯ ಇಲ್ಲ. ಆದರೆ ಮಂಡಳಿಯ ಅಧ್ಯಕ್ಷನಾದ ಮೇಲೆ ಇದರ ಪರಿಚಯವನ್ನೂ ಮಾಡಿಕೊಳ್ಳುವಂತಹ ಅವಕಾಶ ನನಗೆ ಒದಗಿಬಂತು. ಈ ಮಂಡಳಿಗೆ ತನ್ನದೇ ಆದಂತಹ ಆದಾಯ ಮೂಲ ಯಾವುದೂ ಇಲ್ಲ. ಈಗ ಯೋಜನೆಗಳು ಇವೆ, ಆ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ ರಾಜ್ಯ ಸರ್ಕಾರ ಮತ್ತು ಕೆಲವು ಕಡೆ ಕೇಂದ್ರ ಸರ್ಕಾರ, ಮತ್ತು ಲೈಫ್ ಇನ್ಸ್‌ಶ್ಯೂರೆನ್ಸ್ ಕಾರ್ಪೋರೇಷನ್ನಿಂದ ಸಾಲವನ್ನು ತರಬೇಕು, ಆ ಸಾಲದಿಂದ ಯೋಜನೆಗಳನ್ನೆಲ್ಲಾ ಕಾರ್ಯಗತ ಮಾಡಬೇಕು. ಆ ಯೋಜನೆಗಳನ್ನು ಕಾರ್ಯಗತ ಮಾಡಿದ ಪ್ರತಿಫಲದಾರರು ಯಾರಿದ್ದಾರೆ ಅವರಿಂದ ಅದನ್ನು ವಸೂಲಿ ಮಾಡಬೇಕು. ಎಲ್ಲಿಂದ ಸಾಲವನ್ನು ತಂದಿದ್ದಾರೋ ಆ ಸಾಲವನ್ನು ವಾಪಸ್ಸು ಕೊಡಬೇಕು. ಇಷ್ಟು ಅದರ ಕೆಲಸ ಕಾರ್ಯ ಇರತಕ್ಕಂಥದ್ದು. ಇದರಲ್ಲಿ ಏನಾಗುತ್ತಿದೆ ಅಂದರೆ, ನಮ್ಮ ರಾಜ್ಯದಲ್ಲಿ 230-240 ಪಟ್ಟಣಗಳು ಇವೆ. ಅದರ 10ರಷ್ಟು ವಿಧಿಗಳು ಇವೆ. ಈಗ ಒಂದು ಯೋಜನೆಯನ್ನು ಕಾರ್ಯಗತ ಮಾಡಿದರೆ, ಅದರ ಹಣವನ್ನು ವಸೂಲಿ ಮಾಡಬೇಕು. ಯಾರು ಪ್ರಯೋಜನದಾರರು ಇರುತ್ತಾರೆ, ಅವರಿಂದ ಹಣವನ್ನು ವಸೂಲಿ ಮಾಡಬೇಕು. ವಸೂಲಿಯನ್ನು ಮಾಡತಕ್ಕಂಥ ಕೆಲಸ ಈ ಮಂಡಳಿಗೆ ಇಲ್ಲ. ಮುನಿಸಿಪಾಲಿಟಿಯವರು ವಸೂಲಿಯನ್ನು ಮಾಡಿಕೊಳ್ಳುತ್ತಾರೆ, ಇಲ್ಲದಿದ್ದರೆ ಕಾರ್ಪೋರೇಷನ್‌ನವರು ವಸೂಲಿ ಮಾಡಿಕೊಳ್ಳುತ್ತಾರೆ. ಅವರು ತಂದು ಮಂಡಲಿಗೆ ಹಣವನ್ನು ಕೊಡಬೇಕು ಅಂದರೆ ಕೊಡುವುದಿಲ್ಲ. ಈಗ ಬಳ್ಳಾರಿ ನೆಗರ ಸಭೆ ಇದೆ. ಅದು ನನ್ನ ಕಾಲದಲ್ಲಿ worst defaulter ಆಗಿತ್ತು. ಅವರಿಗೆ ನೀರು ಬೇಕು. ನೀರನ್ನು ತೆಗೆದುಕೊಳ್ಳುತ್ತಾರೆ. ನೀರು ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿಕೊಳ್ಳುತ್ತಾರೆ. ಅದಕ್ಕೆ ಹಣವನ್ನು ಮಾತ್ರ ಕೊಡುವುದಿಲ್ಲ. ಅದಕ್ಕೆ ಮಿಟರ್ ಹಾಕತಕ್ಕಂಥ ಒಂದು ಪ್ರಯತ್ನ ನಡೆಯಿತು. ಆದರೆ ಮಿಟರನ್ನು ಹಾಕಿಸಲಿಲ್ಲ. ಈಗ ಬಳ್ಳಾರಿಯಲ್ಲಿ ಮಿಟರ್ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರಿಗೆ ಯಥೇಚ್ಛವಾಗಿ ನೀರು ಮಾತ್ರ ಬೇಕಾಗುತ್ತದೆ. ಅದಕ್ಕೆ ಹಣವನ್ನು ಕೊಡದೇ ಇದ್ದರೆ ಈ ಮಂಡಲಿಗೆ ಹಣ ಎಲ್ಲಿಂದ ಬರುತ್ತದೆ. ನಾಗರೀಕರಿಂದ ವಸೂಲಿಯಾಗುವ ಹಣವನ್ನು ಕೂಡ ಮಂಡಲಿಗೆ ವಾಪಸ್ಸು ಕೊಡುವುದಿಲ್ಲ. ಇಂತಹದ್ದು ಇಡೀ ರಾಜ್ಯದಲ್ಲಿ ಅವ್ಯವಸ್ಥೆ ಆಗರವಾಗಿದೆ. ಉದಾಹರಣೆಗೆ ವಿದ್ಯುಚ್ಛಕ್ತಿ ಮಂಡಳಿ ಇದೆ, ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುತ್ತನ್ನು ಸರಬರಾಜು ಮಾಡುತ್ತಾರೆ. ಅವರ ಪ್ರಯೋಜನವನ್ನು ಪಡೆಯುವ ಬಳಕೆದಾರರು ಯಾರಿದ್ದಾರೋ ಅವರಿಂದ ಹಣವನ್ನು ವಸೂಲಿ ಮಾಡುತ್ತಾರೆ. ಹಣ ಕೊಡದೇ ಇದ್ದರೆ ಆ ತಿಂಗಳಲ್ಲಿ ವಿದ್ಯುತ್ತನ್ನು ಕಡಿತ ಮಾಡುತ್ತಾರೆ. ಆದರೆ ಈ ನಗರ ನೀರು ಸರಬರಾಜು ಮಂಡಳಿಗೆ ಆ ವ್ಯವಸ್ಥೆ ಇಲ್ಲವೇ ಇಲ್ಲ.

ಅಧ್ಯಕ್ಷರು : ತಾವು ಇದರ ಬಗ್ಗೆ ಸಾಕಷ್ಟು ಅನುಭವವನ್ನು ಹೊಂದಿದ್ದೀರಿ. ಈ ತಿದ್ದುಪಡಿಯ ಬಗ್ಗೆ ಹೇಳಿಬಿಡಿ.

ಶ್ರೀ ಸಿ. ಬೈರೇಗೌಡ : ಅದಕ್ಕೋಸ್ಕರ ನಾನು ಹೇಳತಕ್ಕದ್ದು. ಇದು ವ್ಯಾಪಕವಾದಂತಹ ತಿದ್ದುಪಡಿಯಾಗಬೇಕಾಗಿತ್ತು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ

ತಿದ್ದುಪಡಿಯನ್ನು ತಂದಾಗ ಇದರ ಮೂಲ ಉದ್ದೇಶ ಏನು ಎಂದು ಅವರು ಹೇಳಿದ್ದರೆ ಅನುಕೂಲವಾಗುತ್ತಿತ್ತು. ನಾಲ್ಕನೆಯ ಡೈರೆಕ್ಟರ್ ಏತಕ್ಕೆ ಬೇಕಾಗಿತ್ತು, ಅದರಿಂದ ಏನು ಪ್ರಯೋಜನವಾಗುತ್ತದೆ? ಅದರ ಅವಶ್ಯಕತೆ ಏನು? ಇವೆಲ್ಲ ಅವರು ವಿವರವಾಗಿ ಹೇಳಿದ್ದರೆ ಚರ್ಚೆಗೆ ಅನುಕೂಲವಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಈ ರೀತಿಯಾಗಿ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಯಾವ ರೀತಿ ಅದರ ಪ್ರಯೋಜನವನ್ನು ಪಡೆದಿರತಕ್ಕಂಥವರು ಬಳಕೆದಾರರು ಅದರ ಬಿಲ್ಲನ್ನು ಪ್ರತಿತಿಂಗಳು ಕೊಡದೇ ಇದ್ದರೆ ಅವರು ಯಾವ ರೀತಿ ವಿದ್ಯುತ್ತನ್ನು ಕಡಿತ ಮಾಡುತ್ತಾರೋ ಅದೇ ರೀತಿ ಮಾಡತಕ್ಕದ್ದು ಇವತ್ತಿನ ದಿವಸ ಅವಶ್ಯಕತೆ ಇದೆ. ಏಕೆಂದರೆ, ಈ ಯೋಜನೆಗಳು ತಡವಾಗುತ್ತಿದೆ ನಿಜ, ನನಗೂ ಕೂಡ ಗೊತ್ತಿದೆ. ನಾನು ಅಧ್ಯಕ್ಷನಾಗಿದ್ದಾಗ, ಇವರು ಹೇಳಿರತಕ್ಕಂಥ ಅನೇಕ ಸಲಹೆಗಳನ್ನು ಆಗಲೇ ಮಾಡಿದ್ದೇನೆ. ನಾನು ಎಲ್ಲಾ ಜಿಲ್ಲೆಗಳ ಶಾಸಕರುಗಳನ್ನು ಕರೆಯಿಸಿ ಏನೇನು ಆಗಬೇಕಾಗಿದೆ ಎನತಕದ್ದರ ಬಗ್ಗೆ ಒಂದು ನೀಲಿ ಚಿತ್ರವನ್ನು ತಯಾರುಮಾಡಿ ಇಟ್ಟಿದ್ದೆ. ಈಗ ಏನಾಗಿದೆಯೋ ಗೊತ್ತಿಲ್ಲ, ಈಗ ಮುಖ್ಯವಾಗಿರತಕ್ಕಂಥದ್ದು ಏನೆಂದರೆ ಈಗ ಮಂಡಳಿಯಲ್ಲಿ ಹಣ ಇಲ್ಲ. ಹಣ ಇಲ್ಲದೇ ಇರುವ ಕಾರಣದಿಂದ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತಿಲ್ಲ. ಯಾವ ನಿಗದಿತ ವೇಳೆಯಲ್ಲಿ ಯೋಜನೆಗಳನ್ನು ಕಾರ್ಯಗತ ಮಾಡಬೇಕೋ ಆ ನಿಗದಿತ ವೇಳೆಯಲ್ಲಿ ಕಾರ್ಯಗತ ಮಾಡಲಿಕ್ಕೆ ಆಗಲೇ ಇಲ್ಲ. ಹತ್ತಾರು ವರ್ಷ ಈ ಯೋಜನೆಗಳು ಮುಂದಕ್ಕೆ ಹೋಗುತ್ತಲೇ ಇರುತ್ತವೆ. ಹಾಗಾಗಿ ಏನಾಗುತ್ತದೆ ಅಂದರೆ 50 ಲಕ್ಷ ರೂಪಾಯಿಗೆ ತಯಾರು ಮಾಡಿದಂತಹ ಯೋಜನೆ ಅದು ಒಂದು ಕೋಟಿರೂಪಾಯಿಗೆ ಹೋಗುತ್ತದೆ. ಒಂದು ಕೋಟಿ ರೂಪಾಯಿಗೆ ತಯಾರು ಮಾಡಿದಂತಹ ಯೋಜನೆ 5 ಕೋಟಿ ರೂಪಾಯಿಗೆ ಹೋಗುತ್ತದೆ. ಹೀಗಾಗಿ ಏನಾಗುತ್ತಿದೆ ಅಂದರೆ ಇದು ಸಮರ್ಪಕವಾದಂತಹ ರೀತಿಯಲ್ಲಿ ನೀರನ್ನು ಸರಬರಾಜು ಮಾಡುವುದಕ್ಕೂ ಆಗುತ್ತಿಲ್ಲ ಮತ್ತು ನೀರು ಸರಬರಾಜು ಮಾಡುವ ಕಡೆ ಮಂಡಳಿಗೆ ಹಣ ಏನು ವಾಪಸ್ಸು ಬರಗಿತೋ ಅದು ಕೂಡ ಬರುತ್ತಿಲ್ಲ. ಈ ರೀತಿಯಾಗಿ ವ್ಯಾಪಕವಾದಂತಹ ರೀತಿಯಲ್ಲಿ ಯಾವ ರೀತಿ ಆಗಬೇಕು, ಯಾವ ರೀತಿ ಪರಿಣಾಮಕಾರಿಯಾಗಬೇಕು ಎನ್ನತಕ್ಕಂಥ ತಿದ್ದುಪಡಿಯನ್ನು ತಂದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಇದು ಏನೂ ಇಲ್ಲ. ಸುಮ್ಮನೆ ನಾನು ಆಗಲೇ ಹೇಳಿದಹಾಗೆ ಹನ್ನೊಂದರ ಜೊತೆ ಇನ್ನೊಂದು. ಏನು ಎಂದರೆ ಹನ್ನೊಂದು ಇದ್ದರೂ ಒಂದೇ, ಹನ್ನೊಂದರ ಜೊತೆಗೆ ಇನ್ನೊಂದು ಬಂದರೂ ಒಂದೇ. ಅದು ನೂರಹನ್ನೊಂದು ಆದರೂ ಕೂಡ ಒಂದೇ. ಇಂತಹ ಏನೂ ಪರಿಣಾಮಕಾರಿಯಾಗಿ ಇಲ್ಲದೇ ಇರತಕ್ಕಂಥ ತಿದ್ದುಪಡಿಯನ್ನು ಇವತ್ತಿನ ದಿವಸ ತಂದಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ನೀರು ವ್ಯವಸ್ಥಿತವಾಗಿ ಸರಬರಾಜು ಆಗಬೇಕಾಗಿರತಕ್ಕಂಥದ್ದು ಮತ್ತು ಎಷ್ಟು ನೀರು ಬಳಕೆಯಾಗುತ್ತದೆ ಆ ಬಳಕೆಗೆ ಸರಿಯಾದಂತಹ ರೀತಿಯಲ್ಲಿ ಆ ಮಂಡಳಿಗೆ ಹಣ ಪುನಃ ವಾಪಸ್ಸು ಪಡೆಯುವುದರ ಕಡೆ ಶ್ರದ್ಧೆಯನ್ನು ವಹಿಸಬೇಕಾಗಿರತಕ್ಕಂಥದ್ದು ಅತಿ ಅವಶ್ಯಕ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಈಶ್ವರಪ್ಪನವರು ಶಿವಮೊಗ್ಗದಲ್ಲಿ ಮನೆ ಕಂದಾಯವನ್ನು ರಿವೈಸ್ ಮಾಡಿಲ್ಲ ಎನ್ನತಕ್ಕದ್ದನ್ನು ಹೇಳಿದ್ದಾರೆ. ಇದು ಬರೀ ಶಿವಮೊಗ್ಗದಲ್ಲೇ ಅಲ್ಲ. ನಾನು ಅದನ್ನು ನೋಡಿದ್ದೇನೆ. ಹತ್ತಾರು ವರ್ಷಗಳಿಂದ ಮನೆಕಂದಾಯವನ್ನು ರಿವೈಸ್ ಮಾಡದೇ ಇರತಕ್ಕಂಥ ಮುನಿಸಿಪಾಲಿಟಿಗಳು ಈ ರಾಜ್ಯದಲ್ಲಿ ಸಾಕಷ್ಟು ಇವೆ. ಅದರ ಬಗ್ಗೆಯೂ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಯೋಜನೆಗಳಿಗೆ ಯಾವ ಹಣವನ್ನೂ ಕೂಡದೇ ಇದ್ದರೆ ಇದು ಬೆಲೆ ಏರುತ್ತದೆ ಎನ್ನತಕ್ಕದ್ದಕ್ಕೆ ನಾನು ಇದ್ದಂತಹ ಸಂದರ್ಭದಲ್ಲಿ ರೀಜನಲ್ ವಾಟರ್ ಸಪ್ಲೈ ಸ್ಕೀಂ ಮಾಡಿದೆ. ಮಾನ್ಯ ರಾಜಶೇಖರ ಮೂರ್ತಿಯವರು ಇವತ್ತಿನ ದಿವಸ ಏನು ಹೇಳುತ್ತಿದ್ದಾರೆ ಈ ತರಹ ಒಂದು ಯೋಜನೆಯನ್ನು ಸುಮಾರು 8 ನಗರಗಳಿಗೆ ಎಂದರೆ ಕನಕಪುರ, ಆನೇಕಲ್, ಹೊಸಕೋಟೆ

ಮಾಲೂರು, ಕೋಲಾರ ಕೆ.ಜಿ.ಎಫ್, ಬಂಗಾರಪೇಟೆ, ಮತ್ತು ಮುಳಬಾಗಿಲು. ಈ ಪಟ್ಟಣಗಳಿಗೆ ಸಂಬಂದಪಟ್ಟ ಹಾಗೆ ಒಂದು ರೀಜನಲ್ ವಾಟರ್ ಸಪ್ಲೈ ಸ್ಕೀಮನ್ನು ಸುಮಾರು 100 ಕೋಟಿ ರೂಪಾಯಿಗಳ ಅಂದಾಜಿಗೆ ತಯಾರು ಮಾಡಿ.....

ಅಧ್ಯಕ್ಷರು : ತಿದ್ದುಪಡಿಯ ಮೇಲೆ ಹೇಳಿ. ತಾವು ಅನುಭವಿಯಾಗಿದ್ದೀರಿ ಒಂದೇ ಒಂದು ಮಾತಿನಲ್ಲಿ ಹೇಳಿ.

ಶ್ರೀ ಸಿ. ಬೈರೇಗೌಡ : 250 ಕೋಟಿ ರೂಪಾಯಿ ಆದರೂ ಸಹ ಅದನ್ನು ಕಾರ್ಯಗತ ಮಾಡತಕ್ಕದ್ದಕ್ಕೆ ಇವತ್ತಿನ ದಿವಸ ಆಗುತ್ತಿಲ್ಲ. ಆದ್ದರಿಂದ ಈ ಮಂಡಳಿಗೆ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾದರೆ ಈ ಯೋಜನೆಗಳನ್ನು ಸಕಾಲದಲ್ಲಿ ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಹೆಚ್ಚಿನ ಶ್ರದ್ಧೆಯನ್ನು ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಂತ್ರಿಗಳಿಗೆ ಹೇಳಿ ತಾವು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರು ಏನು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ ಆ ವಿಧೇಯಕದಲ್ಲಿ ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಏನೆಂದರೆ ಈಗ 15 ಜನ ಡೈರೆಕ್ಟರ್ಸ್ ಇದ್ದಾರೆ, ಒಬ್ಬ ಎಂ. ಡಿ. ಇದ್ದಾರೆ, ಒಬ್ಬರು ಛೇರ್ಮನ್ ಇದ್ದಾರೆ. 15 ಜನ ಡೈರೆಕ್ಟರ್ ಏನಿದ್ದಾರೆ ಅವರ ಬದಲಾಗಿ ಈಗ 16 ಜನ ಮಾಡಿಬಿಡೋಣ. ಆ ರೀತಿ ಮಾಡುವುದರಿಂದ ಅವರು ಬಹಳ ಹೊಣೆಗಾರಿಕೆಯಿಂದ ಕೆಲಸ ನಿರ್ವಹಿಸಬಹುದು ಎಂಬ ಭ್ರಮೆಯಿಂದ ಇದನ್ನು ತಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಮತ್ತೊಂದು ತಾಂತ್ರಿಕ ಕಾರಣ ಹೇಳಿದ್ದಾರೆ. ಏನು ತಾಂತ್ರಿಕ ಕಾರಣವೆಂದರೆ ಈ ಹಿಂದೆ ಹೆಲ್ತ್ ಅಂಡ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಂದು ಇಲಾಖೆ ಇತ್ತು, ಅದಾದ ಮೇಲೆ ಆ ಒಂದು ಇಲಾಖೆ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್, ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಆಗಿದೆ ಎಂದು. ಹೌದೇನು ಸ್ವಾಮಿ? ಇದು ಆಗಿ ಎಷ್ಟು ವರ್ಷವಾಯಿತು? ಏತಕ್ಕೆ ಈಗ ನಿಮಗೆ ಜ್ಞಾಪಕ ಬಂತು? ಅದಕ್ಕಿಂತ ಹೆಚ್ಚಾಗಿ ಹೆಲ್ತ್ ಅಂಡ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಂದು ಇದ್ದರೆ ಇಬ್ಬರು ಪ್ರತಿನಿಧಿಗಳನ್ನು ಅಥವಾ ಆ ಇಲಾಖೆಯ ಪ್ರತಿನಿಧಿಗಳನ್ನು ಆಗ ಸೇರಿಸಿದ್ದರು. ಇವತ್ತು ಇವರು ಹೆಲ್ತ್‌ಗೆ ಒಬ್ಬರು. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಒಬ್ಬರು ಎಂದು ತಿದ್ದುಪಡಿ ತಂದಿದ್ದರೆ ಇದರಲ್ಲೇನಾದರೂ ಔಚಿತ್ಯ ಇರುತ್ತಿತ್ತು. ಅದು ಬರಲಿಲ್ಲ. ಈಗ ಹೆಲ್ತ್‌ನವರನ್ನೇ ತೆಗೆದುಹಾಕಿ ಬಿಟ್ಟರು. ಅದರ ಬದಲಾಗಿ ಒಂದೇ ಇಲಾಖೆಗೆ ಇಬ್ಬರನ್ನು ಕೊಟ್ಟು ಕೊಂಡಿದ್ದಾರೆ. ತಮ್ಮ ಇಲಾಖೆಯ ಕಾರ್ಯದರ್ಶಿಗಳು ಬೇಕು. ನಿಮ್ಮ ಇಲಾಖೆಯ ಮುನಿಸಿಪಲ್ ಅಡ್ಮಿನಿಸ್ಟ್ರೇಟರ್ ಬೇಕೇ? ಏತಕ್ಕೆ ಸ್ವಾಮಿ? ಈ ಸರ್ಕಾರದ ಗುರಿ ಏನು ಇದೆ, ನಾವು ನಿರ್ದಿಷ್ಟಪಡಿಸಿದಂಥ ಗುರಿಯನ್ನು ಸಾಧಿಸುವುದಕ್ಕೆ ಹೊಣೆಗಾರಿಕೆಯಿಂದ ಅಧಿಕಾರವನ್ನು ಚಲಾವಣೆ ಮಾಡುವಂಥ ಒಂದು ಪರಿಸ್ಥಿತಿಗೆ ಇದನ್ನು ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಒಂದೇ ಒಂದು ಮಾತನ್ನು ಮಾತ್ರ ನಾನು ಹೇಳುತ್ತೇನೆ, ಎಲ್ಲಿಯವರೆಗೆ ಸಂಬಂಧಪಟ್ಟಂಥ ಅಧಿಕಾರಿಗಳು ಹೊಣೆಗಾರಿಕೆಯಿಂದ ನಿರ್ವಹಣೆ ಮಾಡುವುದಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ, ಅಲ್ಲಿಯವರೆಗೂ ಇವರ ಸಂಖ್ಯೆಯನ್ನು ಹೆಚ್ಚಿಗೆ ಮಾಡುವುದರಿಂದ ನಿಮಗೆ ಯಾವುದೇ ಒಂದು ತೃಪ್ತಿ ಬರುವುದಕ್ಕೆ ಸಾಧ್ಯವಿಲ್ಲ, ಪರಿಣಾಮಕಾರಿಯಾದಂಥ ಕೆಲಸವಾಗಲಿಕ್ಕೆ ಸಾಧ್ಯವಿಲ್ಲ. ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಈ ಒಂದು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್ ಏನಿತು, ಇದಕ್ಕೆ ಒಂದು ನಿರ್ದಿಷ್ಟವಾದಂಥ ಕೆಲಸವನ್ನು ಅಂದರೆ ಇಡೀ

ಕರ್ನಾಟಕ ರಾಜ್ಯದಲ್ಲಿ ಕಕ್ಕಸ್‌ಗಳನ್ನು ನಿರ್ಮಾಣ ಮಾಡಬೇಕು ಎಂದು ಕೊಟ್ಟಿದ್ದರು ಅದರ ಬೆಲೆಯನ್ನು ಸರ್ಕಾರದವರು ಅನುಮೋದಿತ ಮಾಡಿದ್ದರು. ಅಲ್ಲಿರುವಂಥ ಎಂ.ಡಿ.ಏನು ಮಾಡಿದರು ಎಂದರೆ ಇಲ್ಲ, ಈ ಸರ್ಕಾರದವರು ಬಹಳ ಕಡಿಮೆ ನಿಗದಿ ಮಾಡಿದ್ದಾರೆ, ಅದರಿಂದ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ತನಗಿಷ್ಟಬಂದಂಥ ರೀತಿಯಲ್ಲಿ ಆ ಹಣವನ್ನು ಯೂನಿಟ್ ಕಾಸ್ಟ್ ಎಂದು ಏನು ಹೇಳುತ್ತೇವೆ, ಆ ಘಟಕಕ್ಕೆ ತಗಲುವ ಹಣವನ್ನು ತನಗಿಷ್ಟ ಬಂದಂಥ ರೀತಿಯಲ್ಲಿ ಹೆಚ್ಚಿಗೆ ಮಾಡಿ ಆ ಹಣವನ್ನು ಖರ್ಚು ಮಾಡಿದ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸ್ವಾಮಿ. ಆದ್ದರಿಂದ ನೀವು ಇಂಥ ಕೆಲಸಕ್ಕೆ ಬಾರದಂಥ ತಿದ್ದುಪಡಿಗಳನ್ನು ತರುವುದರ ಮುಖಾಂತರ ಪರಿಣಾಮಕಾರಿಯಾದಂಥ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಯಾವಾಗ ನಿಮ್ಮ ಹೊಣೆಗೇಡಿತನದಿಂದ ನಿಮ್ಮ ಅಧಿಕಾರಿಗಳು ಕಾರ್ಯನಿರ್ವಹಣೆ ಮಾಡುತ್ತಾರೆ, ಅವರ ಮೇಲೆ ನಿರ್ದಾಕ್ಷಿಣ್ಯವಾದಂಥ ಕ್ರಮವನ್ನು ತೆಗೆದುಕೊಳ್ಳುವುದರ ಮುಖಾಂತರ ಪರಿಣಾಮಕಾರಿಯಾದಂಥ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಹೊರತಾಗಿ ಈ ರೀತಿ ಮಾಡುವುದರಿಂದ ಸಾಧ್ಯವಿಲ್ಲ. ಇವತ್ತೂ ಸಹ ಏನು ತಮ್ಮ ಇಲಾಖೆಗೆ ಎರಡು ಪ್ರತಿನಿಧಿಗಳನ್ನು ಕೊಟ್ಟಿದ್ದೀರಿ, ಅದಕ್ಕೆ ಬದಲಾಗಿ ಹೆಲ್ತ್ ಅಂಡ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಂದು ಮೊದಲು ಏನಿತ್ತು ಆ ಎರಡು ಇಲಾಖೆಗಳಿಗೂ ಸಹಾ ಪ್ರತ್ಯೇಕವಾಗಿ ಹೆಲ್ತ್‌ನ ಪ್ರತಿನಿಧಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರತಿನಿಧಿಯನ್ನು ಮತ್ತು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಎಂದು ಏನು ತಾವು ಹೇಳುತ್ತೀರಿ, ಅವರಿಗೆ ಒಂದು ಪ್ರತಿನಿಧಿಯನ್ನು ಕೊಡುವುದರ ಮುಖಾಂತರ ಇದನ್ನು ತಿದ್ದುಪಡಿ ತರುವುದು ಒಳ್ಳೆಯದು. ಇದರ ಬಗ್ಗೆ ತಾವು ವಿಮರ್ಶೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ತಂದಾಗ ಚರ್ಚೆಯನ್ನು ಲೀಡ್ ಮಾಡುವುದಕ್ಕೆ ಮಂತ್ರಿಗಳು ಸ್ವಲ್ಪ ಸರಿಯಾದ ಮಾಹಿತಿಗಳನ್ನು ಕೊಟ್ಟು, ವಿವರಗಳನ್ನು ಕೊಟ್ಟು, ಈ ಕಾರಣಕ್ಕಾಗಿ ಈ ಮಸೂದೆಯನ್ನು ತಂದಿದ್ದೇವೆ, ಆ ಮಸೂದೆ ಅತ್ಯಾವಶ್ಯಕವಾಗಿದೆ ಎನ್ನುವ ಮಾತನ್ನು ಅವರು ಹೇಳಿದ್ದರೆ ಚರ್ಚೆಗೆ ಅನುಕೂಲವಾಗುತ್ತಿತ್ತು. ವಿಧೇಯಕಕ್ಕೆ ಸೀಮಿತವಾಗಿ ಚರ್ಚೆಯಾಗುವುದಕ್ಕೆ ಅನುಕೂಲವಾಗುತ್ತಿತ್ತು. ಆದರೆ ಎಲ್ಲೆ ದಾಟಿ ಹೋಗುವುದು ಸೂಕ್ತವಲ್ಲ ಎನ್ನುವುದು ಮಾತ್ರ ಹೇಳಿದೆ. ನಾನು ಮೊದಲಿನಿಂದ ಬಹಳ ಸಲ ಹೇಳುತ್ತಿದ್ದೇನೆ. ಇಲ್ಲಿ ಯಾವುದೇ ಒಂದು ವಿಧೇಯಕ ತಂದರೂ ಕೂಡ ಬೋರ್ಡ್ ಮಾಡುವುದು, ಕಮಿಟಿ ಮಾಡುವುದು, ಮತ್ತೊಂದು ಮಾಡುವುದು ಎಂದರೆ ಕೇವಲ ಅಧಿಕಾರಿಗಳಿಗೆ ಅನುಕೂಲವಾಗಿ ಅವರಿಗಾಗಿ ಮಾಡುವ ಹಾಗೆ ಕಾಣುತ್ತದೆ. ಪ್ರತಿಸಲ ಸಾರ್ವಜನಿಕ ಪ್ರತಿನಿಧಿಗಳನ್ನು ಇಟ್ಟುಕೊಂಡು ಅವರ ಪರವಾಗಿ ಏನಾದರೂ ಮಾಡಬೇಕು, ಸಾರ್ವಜನಿಕ ಅಭಿಪ್ರಾಯಗಳನ್ನು ಕ್ರೋಡೀಕರಿಸಬೇಕು, ಆದುದರಿಂದ ಯೋಜನೆಗಳನ್ನು ನಿರ್ಮಾಣ ಮಾಡಬೇಕು, ಯೋಜನೆಗಳನ್ನು ಫಲಕಾರಿಯಾಗಿ, ಪರಿಣಾಮಕಾರಿಯಾಗಿ ಕಾರ್ಯಗತ ಮಾಡಬೇಕು, ಅದಕ್ಕೆ ಸಾರ್ವಜನಿಕ ಪ್ರತಿನಿಧಿ ಅತ್ಯವಶ್ಯಕವಾಗಿದೆ ಎನ್ನುವುದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಮಾನ್ಯ ಮಂತ್ರಿಗಳಲ್ಲಿ ಈ ಒಂದು ಕ್ಲಾರಿಫಿಕೇಷನ್ನನ್ನು ನಾನು ಕೇಳಬಯಸುತ್ತೇನೆ.

* ಶ್ರೀ ಹೆಚ್. ಶಿವಾನಂದ ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಈ ಅಮೆಂಡ್‌ಮೆಂಟ್ ಅವರು ತರುವ ಕಾಲಕ್ಕೆ ಇನ್ನೊಂದು ತೆಗೆದುಕೊಂಡು ಬರಬೇಕಾಗಿತ್ತು. ಏನೆಂದರೆ, Clause 2: 'The Chairman & Managing Director shall possess the prescribed qualification' ಇದರ ಬಗ್ಗೆ ತಾವು ಹೇಳಿದ್ದೀರಿ. ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್‌ಗೆಯಾವ ಕ್ವಾಲಿಫಿಕೇಷನ್ ಇರಬೇಕು ಎನ್ನುವುದರ ಬಗ್ಗೆ ನಿರ್ದಿಷ್ಟವಾಗಿ ಏನೂ ಹೇಳಿಲ್ಲ. ಇದರ ಸಲುವಾಗಿ ಏನಾಗಿದೆ ಎಂದರೆ, ಅದು ಒಂದು

ವೇಗ ಆಗಿರುವುದರಿಂದ ಯಾವ ಪ್ರಕಾರ ಬೇಕಾದರೂ ಮಾಡಿಕೊಳ್ಳುತ್ತಾರೆ. ಇದರಲ್ಲಿ ರೂಲ್ಸ್‌ನಲ್ಲಿ ಇರುತ್ತದೆ. ಆದರೆ ನೀವು ಮತ್ತೆ ಕ್ಲಿಯರ್ ಆಗಿ ಇದನ್ನು ತಂದಿದ್ದರೆ ಚಲೋ ಆಗುತ್ತಿತ್ತು. ಆ ಕಾರಣ ಇವತ್ತಿನ ದಿವಸ ಬರೀ ಡೈರೆಕ್ಟರ್ಸ್ ಸಂಖ್ಯೆ ಮಾತ್ರ 15-16-17 ಮಾಡಿದರೆ ಆಗುವುದಿಲ್ಲ. ಆದರೆ ಇದ್ದ ಕ್ವಾಲಿಫಿಕೇಶನ್ಸ್‌ನಲ್ಲಿ ಡೈರೆಕ್ಟರ್ಸ್‌ನ್ನು ನೇಮಕ ಮಾಡಲು ಬರುತ್ತಿತ್ತು. ಆದಕಾರಣ ಇವತ್ತು ತಾವು ತಂದಂತಹ ಅಮೆಂಡ್‌ಮೆಂಟ್ ಯಾವುದೇ ಅತೀ ಜರೂರು ಆಗಿಲ್ಲವೆಂದು ಹೇಳುತ್ತಾ ಇದನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಒಂದು ತಿದ್ದುಪಡಿಯ ಚರ್ಚೆಯಲ್ಲಿ 7 ಜನ ನಮ್ಮ ಶಾಸಕ ಮಿತ್ರರು ಪಾಲ್ಗೊಂಡಿದ್ದಾರೆ. ನಮ್ಮ ಮಾನ್ಯ ಅನಂತಕೃಷ್ಣ ಅವರು ಇದರ ಬಗ್ಗೆ ಸ್ವಲ್ಪ ಎಕ್ಸ್‌ಪ್ಲೆಸ್ ಮಾಡಬೇಕು ಎಂದು ಹೇಳಿದ್ದು ನಿಜ. ಏಕೆಂದರೆ ವಿಷಯ ಗೊತ್ತಿರುತ್ತದೆ ಎಂದು ನಾನು ಎಕ್ಸ್‌ಪ್ಲೇನ್ ಮಾಡಲಿಲ್ಲ. ನಾವು ಏಕೆ ಮುನಿಸಿಪಾಲಿಟಿಯಲ್ಲಿ ಅಡ್ಮಿನಿಸ್ಟ್ರೇಷನ್ ಡೈರೆಕ್ಟರನ್ನು ಹಾಕುತ್ತಿದ್ದೇವೆಂದರೆ ನಾವು ಯೋಜನೆಗಳನ್ನೆಲ್ಲಾ ಟೌನ್ ಮುನಿಸಿಪಾಲಿಟಿ, ಸಿಟಿ ಮುನಿಸಿಪಾಲಿಟಿ ಇವೆಲ್ಲಾ ಮಾಡುತ್ತಿದ್ದೇವೆ. ಈಗ ಅವರು ದುಡ್ಡು ಕೊಡುವುದಿಲ್ಲ. ಹುಡ್ಕೋದಿಂದ, ಎಲ್‌ಐಸಿಯಿಂದ, ಗವರ್ನಮೆಂಟ್ ಲೋನ್ ತೆಗೆದುಕೊಳ್ಳುತ್ತೇವೆ, ಮುನಿಸಿಪಾಲಿಟಿ ಷೇರ್ ತೆಗೆದುಕೊಳ್ಳುತ್ತೇವೆ. ಷೇರ್ ಎಂದರೆ ಬಹಳ ಜನ ಕೊಡುವುದಿಲ್ಲ, ಅದನ್ನೂ ಲೋನ್ ಆಗಿ ಕನ್‌ವರ್ಟ್ ಮಾಡುತ್ತೇವೆ. ಇದನ್ನೆಲ್ಲ ರೀಪೇಮೆಂಟ್ ಮಾಡಬೇಕಾದರೆ ಕಂಪ್ಲೀಟ್ ನಾವು ಆಕ್ಟ್ರಾಯ್ ಗ್ರಾಂಟ್, ಮೋಟಾರ್ ವೆಹಿಕಲ್ಸ್ ಕಾಂಪನ್ಸೇಷನ್ ಏನು ಇರುತ್ತದೆ ಅದರಲ್ಲಿ ನಾವು ತೆಗೆದುಕೊಳ್ಳುತ್ತೇವೆ. ಈ ರೀತಿ ತೆಗೆದುಕೊಂಡು ಬಿಟ್ಟು ಸರ್ಕಾರಕ್ಕೆ ಡೈರೆಕ್ಟೊರೇಟ್ ಆಫೀಸ್‌ನಲ್ಲಿ ಕಡಿತ ಮಾಡಿಕೊಂಡು ಅದನ್ನು ಸರ್ಕಾರಕ್ಕೆ ರೆಮಿಟ್ ಮಾಡಿ ಅವರಿಗೆ ನಾವು ಅಡ್ವೈಸ್ ಕಳುಹಿಸುತ್ತೇವೆ. ಅದಕ್ಕೆ ಅದರ ಪರವಾಗಿ ಯಾರಾದರೂ ಒಬ್ಬರೂ ಇರಲೇ ಬೇಕು ಎಂದು ನಾವು ತೀರ್ಮನ ಮಾಡಿ ಕೊಂಡು ಮುನಿಸಿಪಲ್ ಡೈರೆಕ್ಟರ್ ಇದ್ದರೆ ಎಷ್ಟು ಅಮೌಂಟ್ ಯಾವ ಮುನಿಸಿಪಾಲಿಟಿಗಳಿಂದ ವಾಟರ್ ಸಪ್ಲೈ ಬೋರ್ಡ್‌ಗೆ ಪೆಂಡಿಂಗ್ ಇದೆ, ಅದನ್ನು ಅವರು ವಸೂಲು ಮಾಡುತ್ತಿದ್ದಾರೋ ಇಲ್ಲವೋ, ಕೊಡುತ್ತಿದ್ದಾರೋ ಇಲ್ಲವೋ ಅಥವಾ ಅದನ್ನು ನಾವು ಸರ್ಕಾರದಿಂದ ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್ ಗ್ರಾಂಟ್ ಕೊಡುವಾಗ ಅದನ್ನು ಕಡಿತ ಮಾಡಿಕೊಂಡು ಅವರಿಗೆ ರೀಪೇಮೆಂಟ್ ಮಾಡುವುದಕ್ಕೆ ಮಾಡಬೇಕು. ಇಲ್ಲದೇ ಇದ್ದರೆ ಇವತ್ತು ವಾಟರ್ ಸಪ್ಲೈ ಬೋರ್ಡ್‌ನಲ್ಲಿ ದುಡ್ಡೇ ಎಲ್ಲಾ ಸಾಲದಲ್ಲಿ ಮಾಡುವುದು. ಮಾನ್ಯ ಬೈರೇಗೌಡರು ಹೇಳಿದ ಹಾಗೆ ಇವತ್ತು ಅದಕ್ಕೆ ಸ್ವಂತ ದುಡ್ಡು ಇಲ್ಲ. ಬಹಳ ಕಡೆಯಲ್ಲೆಲ್ಲಾ ಅಂದರೆ ಅನೇಕ ಮುನಿಸಿಪಾಲಿಟಿಯಲ್ಲಿ ನಾವು ವಾಟರ್ ಸಪ್ಲೈ ಕೊಡುತ್ತಿದ್ದೇವೆ. ಅಲ್ಲಿ ಯೋಜನೆ ತಯಾರು ಮಾಡಿ ಕಾರ್ಯಗತ ಮಾಡಿ ಕೊಟ್ಟಿದ್ದೇವೆ. ಅವರು ಪುನಃ ಡಿಸ್ಟ್ರಿಬ್ಯೂಷನ್ ವಹಿಸಿಕೊಳ್ಳುತ್ತಾ ಇಲ್ಲ. ಅವರು ಪುನಃ ಇಲ್ಲಿ ಸೆಕ್ರೆಟರಿಗೆ ಹೇಳುವುದು, ಈ ತರಹ ತೊಂದರೆಗಳು ಬರುತ್ತಾ ಇವೆ. ಆದ್ದರಿಂದ ಡೈರೆಕ್ಟರ್ ಬೋರ್ಡ್‌ನಲ್ಲಿದ್ದರೆ ಎಷ್ಟು ಮುನಿಸಿಪಾಲಿಟಿಯಲ್ಲಿ ನಾವು ಯೋಜನೆಯನ್ನು ತಯಾರು ಮಾಡಿ ಕಾರ್ಯಗತ ಮಾಡಿದ್ದೇವೆ, ಎಷ್ಟು ಮುನಿಸಿಪಾಲಿಟಿಗಳು ಅದನ್ನು ವಹಿಸಿಕೊಂಡಿಲ್ಲ, ಎಷ್ಟು ಮುನಿಸಿಪಾಲಿಟಿಗಳಿಂದ ಎಷ್ಟು ದುಡ್ಡು ಬರಬೇಕು ಏನು ಎನ್ನುವುದನ್ನು ಕೊ-ಆರ್ಡಿನೇಟ್ ಮಾಡುವುದಕ್ಕೆ ಮಾತ್ರ ಇದನ್ನು ತಂದಿದ್ದೇವೆ. 10 ಇದೆ, 11 ಸೇರಿಸಿಕೊಳ್ಳುವುದು ಎಂದಲ್ಲ. ಗುರುತರವಾದ ಒಂದು ಜವಾಬ್ದಾರಿ ಮುನಿಸಿಪಾಲಿಟಿಗೂ ವಾಟರ್‌ಸಪ್ಲೈ ಬೋರ್ಡ್‌ಗೂ ಇದ್ದು ಒಂದು ರೀತಿ ಒಳ್ಳೆಯ ರ್‍ಯಾಪೋರ್ಟ್ ಬಿಲ್ಡ್ ಅಪ್ ಮಾಡುವ ಕೆಲಸಕ್ಕೋಸ್ಕರ ಇದನ್ನು ಮಾಡಿಕೊಂಡಿದ್ದೇವೆಯೇ ಹೊರತು ಬೇರೇ ಏನೂ ಇಲ್ಲ ಎಂದು ಹೇಳುತ್ತಿದ್ದೇನೆ. ಮಾನ್ಯ ಏಕಾಂತಯ್ಯನವರು ಹೆಲ್ತ್ ಅಂಡ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ತೆಗೆದು ವಸತಿ ಮತ್ತು ನಗರಾಭಿವೃದ್ಧಿ ಹಾಕಿದ್ದೀರಿ ಎಂದು ಹೇಳಿದರು.

ಮೊದಲೇ ಅದು ಇತ್ತು. ಮೊದಲೇ ಮಾಡಬೇಕಾಗಿತ್ತು, ಅವರು ಮಾಡಲಿಲ್ಲ. ಈಗ ತಂದಿದ್ದೇವೆ. ದಯಮಾಡಿ ಇದಕ್ಕೆ ಒಪ್ಪಿಗೆ ನೀಡಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ 1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 :

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆ ಈ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಚೌಡರೆಡ್ಡಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : 1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "1993ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಖಂಡ :2

1993ರ ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):

ಮಾನ್ಯ ಅಧ್ಯಕ್ಷರೆ , 1993ರ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದು